ಚಾಣಕ್ಯ ವಿಶ್ವವಿದ್ಯಾಲಯ

ಆದರ್ಶದ ನೆಲೆಯಲ್ಲಿ ● ಔನ್ನತ್ಯದೆಡೆಗೆ

# ತಂಬೆಲರು

ತ್ರೈಮಾಸಿಕ ಪತ್ರಿಕೆ - ಮಾಘ ಮಾಸದ ಶುಕ್ಲ ಪಕ್ಷ

ಶ್ರೀ ಕ್ರೋಧಿ ನಾಮ ಸಂವತ್ಸರ- ೨೦೨೫



ಸಂಚಿಕೆ ೦೨

ಸಂಪಾದಕೀಯ ಬಳಗ

**ಮಾರ್ಗದರ್ಶನ**
ಕೇಶವಚಂದ್ರ
ಚಂದನ ಭಟ್

**ಶೀರ್ಷಿಕೆ ವಿನ್ಯಾಸ**
ಮಂಜುಪ್ರಸಾದ್

**ಮುಖಪುಟ ವಿನ್ಯಾಸ**
ಯಶವಂತ್ ರಾಜ್

**ಸಂಪಾದಕರು**
ಶರಣ್ಯ
ಶಮಿತಾ
ಅನ್ವಿತ ಡಿ ಎನ್
ಸುಶ್ಮಿತಾ ಬಿ ಆರ್

**ಎರಡು ಕೋಣೆಗಳ ನೀಂ ಮಾಡು ಮನದಾಲಯದಿ ।**
**ಹೊರಕೋಣೆಯಲಿ ಲೋಗರಾಟಗಳನಾಡು ॥**
**ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ ।**
**ವರಯೋಗಸೂತ್ರವಿದು – ಮಂಕುತಿಮ್ಮ ॥**

ಮನದ ಆಲಯದಲ್ಲಿ ನೀನು ಎರಡು ಕೋಣೆಗಳನ್ನು ಮಾಡು. ಹೊರಗಿನ ಕೋಣೆಯಲಿ ಲೋಕದ ಆಟವನ್ನಾಡು. ಒಳಗಿನ ಕೋಣೆಯಲಿ ಮೌನದಿಂದ ತುಂಬಿದ ಶಾಂತಿಯಲ್ಲಿ ವಿಶ್ರಮಿಸು. ಒಳಹೊರಗುಗಳ ಮಧ್ಯೆ ಒಂದು ಸಸಮನ್ವಯವನ್ನು ಕಾಪಾಡಿಕೊಳ್ಳಲು ಇದು ವರದಂತಹ ಸೂತ್ರ, ಎಂದು, ನಮ್ಮ ಮನಃ ಫಟಲದ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಧಾನವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ಮನಸ್ಸೆಂಬುದು ಒಂದು ವಿಶಾಲವಾದ ಹಜಾರದಂತೆ. ಬದುಕಿನ ಜಂಜಡದ ವಿಷಯಗಳೆಲ್ಲಾ ಅಲ್ಲಿಗೆ ಧೂಳು, ಕಸದಂತೆ ಹಾರಿ ಬರುತ್ತಲೇ ಇರುತ್ತದೆ. ಮನೆಯಲ್ಲಿ ದಿನಕ್ಕೆರಡು ಬಾರಿ ಕಸ ಗುಡಿಸಿದಂತೆ ಮನವನ್ನು ಅನುಕ್ಷಣವೂ ಗುಡಿಸುತ್ತಲೇ ಇರಬೇಕು. ಮನೆ, ಮಠ, ಸಂಸಾರ, ಹೆಂಡತಿ, ಗಂಡ, ಮಕ್ಕಳು, ರೋಗ, ಸಂಬಂಧಗಳು, ರಾಗ ದ್ವೇಷಗಳು, ಕೋಪಾಸೂಯೆಗಳು, ನಮ್ಮ 'ಗುಣ'ಗಳಾಗಿರುವ ವಾಸನೆಗಳು, ಹೀಗೆ ಎಷ್ಟೋ ವಿಷಯಗಳು ಕಸದಂತೆ ನಮ್ಮ ಮನಸ್ಸಿನಲ್ಲಿ ನುಗ್ಗಿ ಬರುತ್ತವೆ, ಬಂದು ತುಂಬಿಕೊಳ್ಳುತ್ತವೆ. ಈ ಎಲ್ಲಕ್ಕೆ ಸಂಬಂಧಿಸಿದ ವಿಚಾರಗಳು ಒಂದೇ ಸಮಯದಲ್ಲಿ ಮನಸ್ಸಿನಲ್ಲಿ ಇದ್ದು, ಮನಸ್ಸು ಅವುಗಳನ್ನು ಸದಾಕಾಲ ಮೆಲುಕು ಹಾಕುವಂತೆ ಮಾಡುತ್ತದೆ. ಇವುಗಳ ಭಾರದಿಂದ ಮನಸ್ಸು ನಲುಗುತ್ತದೆ, ಬುದ್ಧಿ ಕೆಡುತ್ತದೆ, ಆತ್ಮ ಸೊರಗುತ್ತದೆ. ಆದರೆ ನಾವು ಈ ಜಗತ್ತಿನಲ್ಲಿ ಬದುಕುತ್ತಿರುವುದರಿಂದ ನಮಗೆ ಅವುಗಳಿಂದ ಸಂಪೂರ್ಣ ಮುಕ್ತಿ ಸಾಧ್ಯವಿಲ್ಲ. ಅವುಗಳೊಂದಿಗೆ ಬದುಕಲೇ ಬೇಕು. ಇಂತಹ ಪರಿಸ್ಥಿತಿಯಲ್ಲಿ ಶಾಂತರಾಗುವುದು ಸಾಧ್ಯವಿಲ್ಲ ಮತ್ತು ಪರತತ್ವವನ್ನು ಅರಿತು ಆತ್ಮವನ್ನು ಲೇಸಾಗಿಸುವುದು ಸಾಧ್ಯವಿಲ್ಲ ಅಲ್ಲವೇ? ಹಾಗೆಂದು ಈ ಸಾಂಸಾರಿಕ ಜಂಜಡದಲ್ಲೇ ನಮ್ಮ ಜೀವನ ಕೊನೆಯಾಗಬೇಕೆ? ಅಂದರೆ, ಅದಕ್ಕೊಂದು ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

# ಅಚಾನಕ್

ಕಥೆ

ಆ ಘೋರ ಕಾಡಿನಲ್ಲಿ ಎತ್ತ ನೋಡಿದರು ಕೊನೆ ಎಂಬುದು ಕಾಣದ ಕಾರಣ, ಓಡಿದಳು ಓಡಿದಳು ಓಡಿದಳು ತನ್ನ ಕಾಲುಗಳು ಸೋತರೂ, ಹಿಂದೊಮ್ಮೆ ಮುಂದೊಮ್ಮೆ ತಿರುಗಿ ತಿರುಗಿ ನೋಡುತ್ತಾ ಓಡುತ್ತಿದ್ದಳು. ಇನ್ನೂ ವೇಗವಾಗಿ ಓಡುತ್ತಾ ಹಿಂತಿರುಗಿ ನೋಡಿದಾಗ ಎಲ್ಲವೂ ಮಾಯ! ಎಲ್ಲವೂ ಸ್ತಬ್ಧ! ಕೇವಲ ಗಾಳಿಯ ಶಬ್ದ ಆಕೆಯ ಕಿವಿಗೆ ಬೀಳುತ್ತಿದೆ. ಆಕಡೆ ಈಕಡೆ ಎಂಟು ದಿಕ್ಕುಗಳತ್ತ ಕಣ್ಣು ಹಾಯಿಸಿದರೂ ಯಾರೂ ಕಾಣುತ್ತಿಲ್ಲ. ಭಯವೂ ಹೆಚ್ಚುತ್ತಲೇ ಇದೆ. "ಅಯ್ಯೋ! ದೇವರೇ, ಇದಾವ ಜನ್ಮದ ಪಾಪ, ಏಕೆ ನನ್ನೊಂದಿಗೆ ಹೀಗಾಗುತ್ತದೆ? " ಎಂದು ಗೋಗರೆಯುತ್ತಿರುವಾಗಲೇ ತನಗೆ ನೆನಪಾಗಿದ್ದು; ತಾನೂ ಒಂದು ಹೆಣ್ಣಾಗಿದ್ದು, ಮತ್ತೊಂದು ಹೆಣ್ಣಿನ ಮನಸ್ಸನ್ನರಿಯದೇ, ಆಕೆಯ ಸಾವಿಗೆ ಕಾರಣವಾದೆ ಎಂಬುದು. "ಹಾಗಾದರೆ ಅದರ ಕರ್ಮದ ಫಲವೇ ನನಗೆ ಇಂದು ಹೀಗಾಗುತ್ತಿರಲು ಕಾರಣವೇ? ಅಯ್ಯೋ! ಶಿವಾ ಎಂಥಾ ಕೆಲಸ ಮಾಡಿದೆ ನಾನು? ನನ್ನಿಂದ ದೊಡ್ಡ ಅಪರಾಧವೇ ಆಯಿತಲ್ಲ! ಇಲ್ಲ, ಇಲ್ಲ ಇನ್ನು ಸುಮ್ಮನಿದ್ದರೆ, ನನ್ನ ಆತ್ಮಕ್ಕೆ ನಾನೇ ವಂಚನೆ ಮಾಡಿದಂತಾಗುವುದು. ಇಲ್ಲ ಈಗಾಗಲು ಸಾಧ್ಯವೇ



ಇಲ್ಲ, ಈಗಲೇ ಅವಳ ಹೆತ್ತವರ ಬಳಿ ಹೋಗಿ ಎಲ್ಲಾ ಸತ್ಯ ಹೇಳಿ ಸಾಧ್ಯವಾದರೆ ಕ್ಷಮಿಸಿ ಎಂದು ಬೇಡಿಕೊಳ್ಳುತ್ತೇನೆ."

ಎಂದು ತನ್ನೇ ತಾ ಮರೆತು ಪಟಪಟನೆ ಒಂದೆರಡು ಹೆಜ್ಜೆ ಮುಂದಿಡಲು, ತನ್ನ ಬಲಭಾಗದಿಂದ ಯಾರೋ ಅವಳ ಬಳಿಯೇ ಬರುತ್ತಿರುವ ಶಬ್ದ ಬಂದಾಗಲೇ ತನಗೆ ಅರಿವಾಗಿದ್ದು, ತಾನೊಂದು ದಟ್ಟ ಘೋರ ಸಂಕಷ್ಟದ ಬಲೆಯಲ್ಲಿ ಸಿಲುಕಿರುವೆನೆಂದು. ಬಲಕ್ಕೆ ತಿರುಗಿ ನೋಡಿದಳು, ಯಾರೂ ಕಾಣುತ್ತಿಲ್ಲ. ಕೇವಲ ಹೆಜ್ಜೆಗಳ ಶಬ್ದ, ಹೆಜ್ಜೆಗಳು ಹತ್ತಿರವಾಗುತ್ತಿದ್ದಂತೆಲ್ಲ, ಅವಳ ಹೃದಯದ ಬಡಿತವು ಹೆಚ್ಚಾಗುತ್ತಿದೆ. ಮೈಯೆಲ್ಲಾ ಬೆವರು, ಗಂಟಲು ಒಣಗುತ್ತಿದೆ, ಧ್ವನಿ ಕಟ್ಟುತ್ತಿದೆ, ಕಣ್ಣುಗಳು ಮಂಜಾಗುತ್ತಿವೆ, ಕೈ-ಕಾಲುಗಳು ನಡುಗುತ್ತಿರುವಾಗಲೇ ಆಕೆಯ ಕಣ್ಣಿಗೆ ಅಪರಿಚಿತವಾದ ನಾಲ್ಕು ರಕ್ಕಸ ಮುಖಗಳು ಕಂಡವು. ಅವರೆಲ್ಲರನ್ನು ನೋಡಿದ ಕೂಡಲೇ ಮತ್ತೆ ಬೇಗವಾಗಿ ಓಡಲು ಶುರುಮಾಡಿದ ಆಕೆ ಒಂದು ಕಲ್ಲಿಗೆ ಎಡವಿ ರಪ್ಪನೆ ನೆಲಕ್ಕೆ ಅಪ್ಪಳಿಸಿದಳು. ಅವರೆಲ್ಲರೂ ಆಕೆಯನ್ನು ಸುತ್ತುವರೆದು, ಇಬ್ಬರು ಕೈ ಹಿಡಿಯಲು, ಮತ್ತೊಬ್ಬ ಆಕೆಯ ವಸ್ತ್ರಕ್ಕೆ ಕೈ ಹಾಕಲು, ಅಶಕ್ತಳಾದ ಆಕೆ "ಯಾರ್ ನೀವೆಲ್ಲಾ, ನನ್ ಹಿಂದೆ ಯಾಕೆ ಬಿದ್ದಿದ್ದೀರಾ? ದಯವಿಟ್ಟು ನನಗೆ ಏನು ಮಾಡಬೇಡಿ, ನನ್ನನ್ನು ಬಿಟ್ಟುಬಿಡಿ, ಕಾಪಾಡಿ ಯಾರಾದ್ರೂ ಕಾಪಾಡಿ...." ಎಂದು ಗೋಗರೆಯುತ್ತಾ ಜೋರಾಗಿ ಚೀರಲು, ಆಕೆಯ ತಂದೆಗೆ ಒಮ್ಮೆಲೇ ಎಚ್ಚರವಾಗಿ ಕಣ್ಣಿಂದ ಬಂದ ಕಂಬನಿಯನ್ನು ಬೆರಳಿಂದ ಒರೆಸಲು, "ಹಾ!! ಇದು ಕನಸೇ?" ಎಂದು ತನಗೆ ತಾನೇ ಸುಧಾರಿಸಿಕೊಂಡು, ಪಕ್ಕದಲ್ಲೇ ಇದ್ದ ಒಂದು ಲೋಟ ನೀರು ಕುಡಿದು, ಓದಿನ ಸಲುವಾಗಿ ಬೇರೆ ಸ್ಥಳದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ನನ್ನ ಮಗಳಿಗೆ ಒಂದು ಕರೆ ಮಾಡಬೇಕೆಂದು, ಹಾಸಿಗೆಯಿಂದ ಎದ್ದು, ಮೊಬೈಲ್ ಕೈಗೆತ್ತಿಕೊಳ್ಳಲು, ಅಪರಿಚಿತ ಸಂಖ್ಯೆಯಿಂದ ಕರೆ ಬರುವುದನ್ನು ನೋಡಿ, " ಯಾರಿದು?" ಎಂದು ಹೇಳಿಕೊಳ್ಳುತ್ತಾ, ಕರೆಯನ್ನು ಸ್ವೀಕರಿಸಿ "ಹಲೋ" ಎನ್ನಲು, ಅತ್ತಲಿನಿಂದ ಬಂದ ಸುದ್ದಿ ಕೇಳಿ ತಂದೆ ಗಾಬರಿಯಿಂದ ಕುಸಿದು ಪಕ್ಕದಲ್ಲಿ ಇದ್ದ ಮಂಚದ ಮೇಲೆ ಕೂರುವನು.

- **ಸಹನಾ ತೊಂಡಿಕಟ್ಟಿ,** ತೃತೀಯ ಬಿಸಿಎ.

## ಕೃತಕ ಬುದ್ಧಿಮತ್ತೆ: ನಾಳೆಯ ಜಗತ್ತಿಗೆ ಹೊಸ ಬೆಳಕು

ನಾನು ಚಿಕ್ಕವನಿದ್ದಾಗ ನಮ್ಮ ಅಜ್ಜಿ ಹೇಳುತ್ತಿದ್ದ ಕಥೆಗಳಲ್ಲಿ ಯಂತ್ರ ಮಾನವರ ಬಗ್ಗೆ ಕೇಳಿದ್ದೆ. ಆಗ ಅದೆಲ್ಲ ಕಲ್ಪನೆ ಅನ್ನಿಸಿತ್ತು. ಆದರೆ ಇಂದು ಆ ಕಲ್ಪನೆ ನಿಜವಾಗಿದೆ. ಕೃತಕ ಬುದ್ಧಿಮತ್ತೆಯು ನಮ್ಮ ಜೀವನದ ಭಾಗವಾಗಿಬಿಟ್ಟಿದೆ. ಮೊನ್ನೆ ನಮ್ಮ ಮನೆಯ ಹತ್ತಿರದ ಆಸ್ಪತ್ರೆಯಲ್ಲಿ ರೋಗ ನಿರ್ಣಯಕ್ಕೆ ಕೃತಕ ಬುದ್ಧಿಮತ್ತೆಯನ್ನು ಬಳಸುತ್ತಿರುವುದನ್ನು ನೋಡಿದೆ. ನಮ್ಮ ರೈತರು ಬೆಳೆಗಳ ಆರೈಕೆಗೆ ಕೃತಕ ಬುದ್ಧಿಮತ್ತೆ ಆಧಾರಿತ ಅಪ್ಲಿಕೇಷನ್ ಬಳಸುತ್ತಿದ್ದಾರೆ. ಶಾಲೆಗಳಲ್ಲಿ ಮಕ್ಕಳಿಗೆ ವೈಯಕ್ತಿಕ ಕಲಿಕೆಗೆ ಕೃತಕ ಬುದ್ಧಿಮತ್ತೆ ನೆರವಾಗುತ್ತಿದೆ. ನಮ್ಮ ಜಂಗಮವಾಣಿಯಲ್ಲಿ ಇರುವ ಸಿರಿ, ಅಲೆಕ್ಸಾ ಮುಂತಾದ ಆಪ್ ಗಳು ನಮ್ಮೊಂದಿಗೆ ಮಾತನಾಡುತ್ತವೆ. ಆದರೆ ಈ ತಂತ್ರಜ್ಞಾನದ ಬಳಕೆ ಕೇವಲ ನಗರಗಳಿಗೆ ಮಾತ್ರ ಸೀಮಿತವಾಗಬಾರದು. ನಮ್ಮ ಹಳ್ಳಿಗಳಿಗೂ ಇದರ ಪ್ರಯೋಜನ ಸಿಗಬೇಕು. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಹಲವು ಸ್ಟಾರ್ಟ್‌ಅಪ್ ಕೃತಕ ಬುದ್ಧಿಮತ್ತೆ ಆಧಾರಿತ ಕನ್ನಡ ಭಾಷಾ ಕಲಿಕೆ, ಅನುವಾದ ಮತ್ತು ಧ್ವನಿ ಗುರುತಿಸುವಿಕೆ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುತ್ತಿವೆ. ನಮ್ಮ ಯುವಕರು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ತರಬೇತಿ ಪಡೆಯಬೇಕು. ಆದರೆ ಇದರ ಜೊತೆಗೆ ನಮ್ಮ ಸಂಸ್ಕೃತಿ, ಮೌಲ್ಯಗಳನ್ನು ಉಳಿಸಿಕೊಳ್ಳಬೇಕು. ಕೃತಕ ಬುದ್ಧಿಮತ್ತೆಯು ನಮಗೆ ಸಹಾಯಕವಾಗಿರಬೇಕೇ ಹೊರತು ನಮ್ಮ ಮೇಲೆ ನಿಯಂತ್ರಣ ಸಾಧಿಸಬಾರದು.




ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು ಇನ್ನೂ ಹೆಚ್ಚಿನ ಕ್ಷೇತ್ರಗಳಿಗೆ ವಿಸ್ತರಿಸಲಿದೆ. ನಮ್ಮ ಸರ್ಕಾರ ಇದಕ್ಕೆ ಸೂಕ್ತ ನಿಯಮಗಳನ್ನು ರೂಪಿಸಬೇಕು. ಕೃತಕ ಬುದ್ಧಿಮತ್ತೆ ಬಳಕೆಯಿಂದ ಕೆಲವು ಉದ್ಯೋಗಗಳು ಹೋಗಬಹುದು. ಹಾಗೆಯೇ ಹೊಸ ಉದ್ಯೋಗಗಳೂ ಸೃಷ್ಟಿಯಾಗಬಹುದು. ಆದರೆ ನಾವು ಆ ಎಲ್ಲಾ ಬದಲಾವಣೆಗೆ ಸಿದ್ಧರಾಗಬೇಕು. ಕೃತಕ ಬುದ್ಧಿಮತ್ತೆಯು ನಮ್ಮ ಭವಿಷ್ಯ. ಅದನ್ನು ವಿವೇಕಯುತವಾಗಿ ಬಳಸೋಣ. ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯ ನಿರ್ಮಿಸೋಣ.

- **ಯತೀಶ್ ಟಿ. ಎಂ.,** ತೃತೀಯ ಬಿಸಿಎ.

# ಪುಸ್ತಕಗಳಿಂದ ನಾ ಕಂಡ ಜಗತ್ತು

## ಡಾ. ಶಿವರಾಂ ಕಾರಂತ

ಮೂಕಜ್ಜಿ ನನಗೆ ಬಹಳ ಹಿಡಿಸಿದಳು!! ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಅದ್ಭುತ ಪುಸ್ತಕ ಇದು. ಇದರ ಕರ್ತೃ ಕಡಲ ತೀರದ ಭಾರ್ಗವ ಶಿವರಾಮ ಕಾರಂತರು. ಸುಮಾರು ೬ ವರ್ಷದ ಹಿಂದೆ ಈ ಪುಸ್ತಕ ಓದಿದ ನೆನಪು. ನನಗೆ ಆದರೆ ಅರ್ಥವಾಗಿರಲಿಲ್ಲ. ಈಗ ಮತ್ತೆ ಓದಿದೆ ಸಾಮಾನ್ಯಕ್ಕೆ ಅರ್ಥೈಸಿಕೊಳ್ಳುವ ವಿಷಯಗಳಿಗಿಂತ ಬಹು ಭಿನ್ನ ಕತೆ. ನಮ್ಮ ಯೋಚನೆಗೂ ಅತೀತವಾದದ್ದು ಪರಿಧಿಗೂ ಮೀರಿದ್ದು... ಮೂಕಜ್ಜಿಯ ಅದೆಂತಾ ಕನಸಿದು..!! ಮೂಕಜ್ಜಿ ಕೇವಲ ಒಬ್ಬ ಮುದುಕಿ ಮಾತ್ರವಲ್ಲ, ಅವಳು ಪ್ರಜ್ಞೆಯ ಆಳವನ್ನೇ ಪರಿಸುವ ತತ್ವಜ್ಞೆ. ಅವಳ ಮಾತುಗಳು ಜೀವದ ಮೇಲಿನ ಅರ್ಥವತ್ತಾದ ವಿಚಾರಗಳು, ಅನಿವಾರ್ಯತೆಯ ಬೌದ್ಧಿಕತೆ ಮತ್ತು ಮಾನವ ಹೃದಯ ತುಂಬಿದ ಭಾವನೆಗಳನ್ನು ಅನಾವರಣಗೊಳಿಸುತ್ತವೆ. ಅವಳು ಹೇಳುವ "ಅಮ್ಮ ಕರೆಯುವಾಗ ಅಮ್ಮನ ಬಳಿ ಹೋಗಲು ಭಯವೇಕೆ?" ಎಂಬ ಮಾತು, ಜೀವನದ ಅಂತಿಮ ಸತ್ಯವನ್ನು ಸುಂದರವಾಗಿ ವ್ಯಕ್ತಪಡಿಸುತ್ತದೆ! ಮೂಕಜ್ಜಿಯ ಕನಸುಗಳು ಅವ್ಯಕ್ತವನ್ನೂ ವ್ಯಕ್ತವನ್ನಾಗಿ ಮಾಡುವ ವಿಶಿಷ್ಟ ಸಾಮರ್ಥ್ಯವನ್ನು ಹೊಂದಿದೆ. ಕಾರಂತರ ಈ ಕೃತಿಯು ಪ್ರತಿ ಹಾದಿಯಲ್ಲೂ ಮಾನವನ ಆತ್ಮಸಾಕ್ಷಾತ್ಕಾರ ಮತ್ತು ಜೀವನದ ಉದ್ದೇಶವನ್ನು ಕಂಡುಹಿಡಿಯುವ ಪ್ರಬಂಧದಂತೆ ಅನಿಸುತ್ತದೆ.




ಪಾರಮಾರ್ಥಿಕ ತತ್ವಗಳು, ಆಧ್ಯಾತ್ಮಿಕತೆ, ಧಾರ್ಮಿಕತೆ, ಮತ್ತು ವೈಜ್ಞಾನಿಕ ಯೋಚನೆಗಳ ನಡುವೆ ಶ್ರದ್ಧೆಯಿಂದ ತಾಳಮೇಳವನ್ನು ಸ್ಥಾಪಿಸಿರುವುದು ಈ ಕಾದಂಬರಿಯ ಪ್ರಮುಖ ಅಂಶವಾಗಿದೆ. ಇನ್ನು ಭೌತಿಕ ಮತ್ತು ಆಧ್ಯಾತ್ಮಿಕ ಜೀವನದ ನಡುವಿನ ಸಮನ್ವಯವನ್ನು ಕಾರಂತರು ತಮ್ಮ ನಿರೂಪಣೆಯಲ್ಲಿ ಕಲಾತ್ಮಕವಾಗಿ ಜೋಡಿಸಿದ್ದಾರೆ. ಕಾದಂಬರಿಯ ಪಾತ್ರಗಳು ಮತ್ತು ಅವುಗಳ ಸಂಭಾಷಣೆಗಳು ಓದುಗರ ಮನಸ್ಸಿನಲ್ಲಿ ಚಿಂತನೆಗೆ ಮಣ್ಣು ನೀರು ಹಾಕುವಂತೆ ಜೀವನದ ನಿಜವಾದ ಅರ್ಥವನ್ನು ಹುಡುಕಲು ಪ್ರೇರಣೆ ನೀಡುತ್ತವೆ. ಆತ್ಮ, ಪರಮಾತ್ಮ, ದೇವರು, ಅವತಾರ, ಆಚಾರ, ವಿಚಾರ, ಗಂಡು, ಹೆಣ್ಣು, ಕಾಮ, ಮೋಕ್ಷ, ಸಂಸಾರ, ವೈರಾಗ್ಯ, ಭಯ, ಭಕ್ತಿ, ಪ್ರೀತಿ, ನೀತಿ, ಹುಟ್ಟು, ಸಾವು, ಜನ್ಮ, ಪುನರ್ಜನ್ಮ.. ಏನಿಲ್ಲ ಇದರಲ್ಲಿ...? ಎಲ್ಲವೂ ಇವೆ. ಕಾರಂತಜ್ಜ ಈ ಎಲ್ಲಾ ವಿಷಯಗಳನ್ನು ಮೂಕಜ್ಜಿಯ ಮೂಲಕ ಕಟ್ಟಿ ಕೊಟ್ಟ ಪರಿ ಅದೆಷ್ಟು ಚಂದ!!


"ದೇವರಲ್ಲಿ ನಾನೇನೂ ಬೇಡುವುದಿಲ್ಲ. ಎಲ್ಲವನ್ನು ಕೊಟ್ಟಿದ್ದಾನೆ ". "ಅಮ್ಮ ಕರೆಯುವಾಗ ಅಮ್ಮನ ಬಳಿ ಹೋಗಲು ಭಯವೇಕೆ.. ?" ಮನಸ್ಸಿಗೆ ತಟ್ಟಿದ ಮಾತುಗಳಿವು.... ಇಂತಹ ಹಲವು ಮನ ಮುಟ್ಟಿದ ಮಾತುಗಳು ಇದರಲ್ಲಿವೆ.. ಬದುಕಿನ ಮೂಲ ನಮಗ್ಯಾರಿಗೂ ತಿಳಿಯದು. ಆದರೆ ಈ ಕಾದಂಬರಿ ಎಲ್ಲವನ್ನೂ ತಿಳಿಸಬಲ್ಲದು.. ಮೂಕಜ್ಜಿ ಹೇಳುವಂತೆ "ಕತೆ ಯಾವುದಾದ್ರೂ ನಾನು ನಂಬುವದು ಅದರಲ್ಲಿರುವ ನಾಲ್ಕು ಒಳ್ಳೆ ಮಾತುಗಳನ್ನು".. ಇದರಲ್ಲಿ ಸಾಕಷ್ಟು ಒಳ್ಳೆ ಮಾತುಗಳಿವೆ, ನಂಬುವಂತದ್ದು!! ಇವೆಲ್ಲವನ್ನೂ ಬಿಡಿ ಬಿಡಿಯಾಗಿ ಬಿಡಿಸಿಟ್ಟ ಕಾರಂತಜ್ಜನ ಮೂಕಜ್ಜಿ ಹಿಡಿಸಿದಳು! ಬಹಳ ಹಿಡಿಸಿದಳು!! "ಮೂಕಜ್ಜಿ"ಯನ್ನು ಬರೆದದ್ದು ದಶಕಗಳ ಹಿಂದೆ ಆದರೂ, ಅದರ ತತ್ತ್ವಗಳು, ಪ್ರಶ್ನೆಗಳು, ಮತ್ತು ಸತ್ಯಗಳು ಇಂದಿಗೂ ಅತ್ಯಂತ ಪ್ರಸ್ತುತವಾಗಿವೆ. ಭಗ್ನತೆ, ಭರವಸೆ, ಮತ್ತು ಮಾನವ ಸಂಬಂಧಗಳ ಒಳತತ್ತ್ವಗಳು ಈ ಕಾದಂಬರಿಯು ಕಾಲಾತೀತವಾದದ್ದು ಎಂಬುದನ್ನು ಹೇಳುತ್ತವೆ. ಹೀಗಾಗಿ ಮೂಕಜ್ಜಿಯ ಕನಸುಗಳು ಅತ್ಯುತ್ತಮ ಕಾದಂಬರಿಗಳಲ್ಲಿ ಒಂದಾಗಿದೆ.

"ಓದು ಕೇವಲ ಹವ್ಯಾಸವಲ್ಲ ಅದು ಒಂದು ಹಸಿವು"

- **ಅಭಿಲಾಷ್ ಜಿ**, ಪ್ರಥಮ ಎಂಸಿಎ

---

ನಾನು ಓದಿದ ಮೊದಲ ಪುಸ್ತಕ. ನಾನು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಯಲು ಕಾರಣವಾದ ಪುಸ್ತಕ. ಲೇಖಕರು ಕಥೆಗೆ ಪೂರಕವಾಗಿ ಶೀರ್ಷಿಕೆಯನ್ನು ನಿರ್ಧರಿಸಿದ್ದಾರೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬ ಮಾತು ಈ ಪುಸ್ತಕಕ್ಕೆ ಒಪ್ಪುತ್ತದೆ. ನೋಡಲು ಚಿಕ್ಕ ಪುಸ್ತಕ ಆದರೆ ಓದಿದ ಪ್ರತಿಯೊಬ್ಬರ ಮನಸ್ಸಿನಲ್ಲೂ ತನ್ನದೇ ಆದ ಛಾಪು ಮೂಡಿಸುವ ಶಕ್ತಿ ಅದಕ್ಕಿದೆ. ಭಾರತದ ಸಮಾಜದಲ್ಲಿದ್ದ ಬಾಲ್ಯವಿವಾಹ, ವಿಧವೆಯರನ್ನು ನಡೆಸಿಕೊಳ್ಳುವ ರೀತಿ ಮದುವೆಯೆಂದರೇನು ಎಂದು ಅರಿಯದ ವಯಸ್ಸಿಗೆ ಮದುವೆ, ಗಂಡ ಎಂದರೇನು ಎಂದು ತಿಳಿಯದ ವಯಸ್ಸಿಗೆ ವಿಧವೆಯಾಗಿ ತನ್ನ ಅಣ್ಣನ ಮದುವೆ ತನ್ನ ಮನೆಯಲ್ಲಿಯ; ತನ್ನ ಕಣ್ಣಮುಂದೆ ನಡೆದರೂ ತಾನು ಮಾತ್ರ ಕೋಣೆಯಲ್ಲಿ ಕೂತಾಗ ಒಂದು ಹೆಣ್ಣು ಮಗುವಿನ ಮುಗ್ಧ ಮನಸ್ಸಿನ ಪರಿಸ್ಥಿತಿ, ಆಕೆಯ ವೇದನೆ, ತನಗೆ ಅರಿಯದ ಅಪರಾಧ ತಾನೇನು ಮಾಡಿರುವೆನೆಂಬ ಪ್ರಶ್ನೆ ಇವೆಲ್ಲವೂ ಪುಸ್ತಕದ ಭಾಗವಾಗಿವೆ. ಗಂಡನನ್ನು ಕಳೆದುಕೊಂಡಳು, ಪ್ರೀತಿಯಲ್ಲಿ ಬಿದ್ದು ಅವನಿಂದಲೂ ವಂಚಿತಳಾದಳು, ತನ್ನ ತಾಯಿಯನ್ನು ಕಳೆದುಕೊಂಡಳು, ಇನ್ನು ತಂದೆ, ಇವಳ ಪ್ರೀತಿಗೆ ವಿರೋಧ ಮಾಡಿದರು. ಆದರೆ ಹೆಂಡತಿ ಸತ್ತು ತಿಂಗಳು ಕಳೆಯದಿದ್ದರು ಐವತ್ತು ವರ್ಷದ ತಂದೆ ಮದುವೆಗೆ ತಯಾರಿ ನಡೆಸುತ್ತಿರುವಾಗ ತನ್ನ ಮದುವೆಗೆ ಒಪ್ಪದ ತಂದೆಯನ್ನು ಧಿಕ್ಕರಿಸಿ ಮನೆಬಿಟ್ಟು ತನ್ನ ಜೀವನದ ಹಾದಿ ಹಿಡಿದ ಮಾಲತಿ ಎಂಬ ಹೆಣ್ಣಿನ ಕಥೆ. ಜೀವನವನ್ನು ಕಟ್ಟಿಕೊಳ್ಳುವ ಆಸೆಯನಿತ್ತು ಹೊರಟ ಮಾಲತಿಗೆ ವಿಧಿ ಬರೆದ ಕಥೆಯೇ ಬೇರೆ. ಆಕೆಯ ಪರಿಸ್ಥಿತಿ ಅವಳನ್ನು ಅವಳೇ ಮಾರಿಕೊಂಡು ಬದುಕಲು ಕಾರಣವಾಯಿತು. ಎಷ್ಟರ ಮಟ್ಟಿಗೆಯೆಂದರೆ ಕೊನೆದಿನಗಳಲ್ಲಿ ತನ್ನ ಸ್ವಂತ ತಂದೆಯೇ ತನ್ನ ಬಳಿ ಬರುವವರೆಗೆ. ಮಧ್ಯದಲ್ಲಿ ಆಕೆಯ ಜೀವನ ಸುಖವಾಗಿದ್ದರು ಎಲ್ಲಾ ಹೆಣ್ಣಿನಂತೆ ಬದುಕಲು ಆಕೆಗೆ ಸಾಯುವವರೆಗೂ ಸಾಧ್ಯವಾಗಲಿಲ್ಲ. ಮಾಲತಿಯಲ್ಲಿದ್ದ ಸ್ವಾಭಿಮಾನ, ಆಕ್ರೋಶ, ನೋವು, ಸಂಕಟ, ತಾನಿಷ್ಟಪಟ್ಟ ಬದುಕನ್ನು ಬದುಕಬೇಕೆಂದ ತುಡಿತ, ಈ ತುಡಿತಗಳನ್ನು ತನ್ನ ಕೈಯಲ್ಲಿ ಪೂರ್ಣವಾಗಿಸಲು ಆಗಲಿಲ್ಲವಲ್ಲ ಎಂಬ ಅಸಹಾಯಕತೆ ನನ್ನ ಕಣ್ಣಂಚಲ್ಲಿ ನೀರುತರಿಸಿದ ಭಾವಗಳು.




ಪುಸ್ತಕದಲ್ಲಿನ ಮಾಲತಿಯೆಂಬ ಪಾತ್ರ ಎಷ್ಟೋ ಹೆಣ್ಣುಮಕ್ಕಳ ಕಥೆ ಮತ್ತು ವ್ಯಥೆ. ವಿಧವೆಯರು ಹಣೆಗೆ ಸಿಂದೂರ ಹಚ್ಚಬಾರದು, ಕೈಗೆ ಬಳೆ ತೊಡಬಾರದು, ಮುಡಿಗೆ ಹೂವು ಮುಡಿಯಬಾರದು ಎಂಬ ಆಚಾರಕ್ಕೆ ನನ್ನ ಧಿಕ್ಕಾರ. ಗಂಡ ಬರುವ ಮುನ್ನವು ಇವೆಲ್ಲವೂ ಹೆಣ್ಣಿನ ಆಸ್ತಿ. ಅವನು ಇಲ್ಲದಾಗಲೂ ಅವು ಹೆಣ್ಣಿನ ಆಸ್ತಿ. ಹೆಂಡತಿ ಸತ್ತಮೇಲೆ ಮತ್ತೊಂದು ಮದುವೆಯಾಗಲು ಗಂಡಿಗೆ ಎಷ್ಟು ಅಧಿಕಾರ ಇದೆಯೋ ಅಷ್ಟೇ ಅಧಿಕಾರ ಹೆಣ್ಣಿಗೂ ಇದೆ ಎಂಬುದು ನನ್ನ ಅಭಿಪ್ರಾಯ. ಮಾಲತಿಯ ಪ್ರೀತಿಯನ್ನು ಆಕೆಯ ಆಕಾಂಕ್ಷೆಗಳು ತಂದೆಯಾಗಿ ಅರಿತಿದ್ದರೆ ಮಾಲತಿಯ ಜೀವನ ಸುಖದಿಂದ ಇರುತ್ತಿತ್ತು. ಹೌದು! ಈಗಿನ ಪ್ರಪಂಚದಲ್ಲಿ ವಿಚ್ಛೇದನ ಪಡೆಯುವುದು, ಗಂಡ ಸತ್ತನಂತರ ಮತ್ತೊಂದು ಮದುವೆಯಾಗುವುದು ಎಲ್ಲವೂ ಸಹಜವಾಗಿದೆ. ಆದರೆ, ಅದೊಂದು ಕಾಲವಿತ್ತು; ಹೆಣ್ಣಿನ ಮೇಲಿನ ದೌರ್ಜನ್ಯಕ್ಕೆ ಲೆಕ್ಕವೆ ಇರುತ್ತಿರಲಿಲ್ಲ, ಆಕೆಯ ಆಕ್ರಂದನ ಕೇಳುವವರಿರುತ್ತಿರಲಿಲ್ಲ, ಬದುಕಿದ್ದೂ ಸತ್ತಂತೆ ಇರುತ್ತಿದ್ದಳು. ಈಗಿನ ಹೆಣ್ಣುಮಕ್ಕಳ ಸ್ವಾತಂತ್ರ್ಯಕ್ಕೆ, ಆಕೆಯ ಅಸ್ತಿತ್ವಕ್ಕೆ, ಮತ್ತು ಆಕೆಯ ಸ್ಥಾನ ಮಾನಕ್ಕೆ ಬೆಲೆಸಿಗುವಹಾಗೆ ಮಾಡಿದ ಎಲ್ಲಾ ಉತ್ತಮರಿಗೆ ನನ್ನ ನಮನ.

**- ಗಾನವಿ**, ದ್ವಿತೀಯ ಬಿ.ಎ.

# ಏಕ್ ಭಾರತ್ ಶ್ರೇಷ್ಠ ಭಾರತ್-II: ಅನುಭವಗಳ ಹಬ್ಬ

ಜನವರಿ 16 ರಿಂದ 27 ರವರಗೆ ತೋರಣಗಲ್ಲು, ಬಳ್ಳಾರಿಯಲ್ಲಿ ನಡೆದ ಏಕ್ ಭಾರತ್ ಶ್ರೇಷ್ಠ ಭಾರತ್ ರಾಷ್ಟ್ರೀಯ ಶಿಬಿರದಲ್ಲಿ ಭಾಗವಹಿಸಿರುವುದು ನಮಗೆ ಒಂದು ಅದ್ಭುತ ಅನುಭವ ನೀಡಿದೆ. ವಿವಿಧ ರಾಜ್ಯಗಳ ಕೆಡಟ್‌ಗಳೊಂದಿಗೆ 12 ದಿನಗಳನ್ನು ಕಳೆದ ಏಕತೆ, ಶಿಸ್ತು ಮತ್ತು ಸ್ನೇಹವನ್ನು ಗಳಿಸಿದ ಧನ್ಯತಾ ಭಾವ ನಮಗಿದೆ. ಶಿಬಿರವು ಸ್ವಾಗತ, ಸಭೆಯ ಪರಿಚಯ ಮತ್ತು ಗಣ್ಯರ ಭಾಷಣಗಳಿಂದ ಪ್ರಾರಂಭವಾಯಿತು. ಎಕ್ಸ್ಚೇಂಜ್ ಕೆಡೆಟ್ ಪ್ರೋಗ್ರಾಮಲ್ಲಿ ನಾವೆಲ್ಲಾ ಹೊಸ ಸ್ನೇಹಿತರನ್ನು ಮಾಡಿಕೊಳ್ಳುವ ಜೊತೆಗೆ, ಅವರೊಂದಿಗೆ ಬೆರೆಯುವುದರೊಂದಿಗೆ ನಮ್ಮ ಉತ್ಸಾಹವನ್ನೂ ಹೆಚ್ಚಿಸಿಕೊಂಡೆವು. ಹಗ್ಗಜಗ್ಗಾಟ, ವಾಲಿಬಾಲ್, ಥ್ರೋಬಾಲ್, ನೃತ್ಯ, ಬೀದಿ ನಾಟಕ, ಕ್ವಿಜ್ ಹೀಗೆ ಹಲವಾರು ಸ್ಪರ್ಧೆಗಳು ನಡೆದವು. ನಮ್ಮ ಕಂಟಿನ್ಜೆಂಟ್ ಥ್ರೋಬಾಲ್‌ನಲ್ಲಿ ಚಿನ್ನದ ಪದಕ ಹಾಗೂ ಅತ್ಯುತ್ತಮ ನೃತ್ಯ ಪ್ರದರ್ಶನ ಪ್ರಶಸ್ತಿ ಗೆದಿದ್ದು ಹೆಮ್ಮೆಯ ವಿಷಯ. ಶಿಬಿರದ ಇನ್ನೊಂದು ಮರೆಯಲಾಗದ ಅನುಭವ "ಹಂಪಿ ಪ್ರವಾಸ" ವಿರೂಪಾಕ್ಷ ದೇವಸ್ಥಾನ, ಲೋಟಸ್ ಮಹಲ್ ಮತ್ತಿತರ ಐತಿಹಾಸಿಕ ತಾಣಗಳನ್ನು ನೋಡಿದಾಗ, ನಮ್ಮ ಸಂಸ್ಕೃತಿ ಮತ್ತು ಇತಿಹಾಸದ ಮಹತ್ತಿನ ಅರಿವಾಯಿತು. ಈ ಶಿಬಿರದಲ್ಲಿ ನಾವು ಗೆದ್ದೆವು ಎನ್ನುವುದಕ್ಕಿಂತ ಹೆಚ್ಚಾಗಿ ಹೊಸ ಪರಿಚಯ, ಸ್ನೇಹ, ಒಗ್ಗೂಡಿ ಆಡಿದ ಅದ್ಭುತ ಅನುಭವ ಮತ್ತು ನೆನಪಿನ ಮೂಟೆಯ ಜೊತೆ ಮರಳುವ ಅವಕಾಶ ನಮ್ಮದಾಯಿತು. ಇವೆಲ್ಲವನ್ನೂ ಮನದಲ್ಲಿ ಉಳಿಸಿಕೊಂಡು, ಹೊಸ ಉತ್ಸಾಹದೊಂದಿಗೆ ಮುಂದೆ ಸಾಗಬಯಸುತ್ತೇವೆ.

ಜೈ ಹಿಂದ್

- **ಸ್ನೇಹಾ ಕಟಿಗೆನ್ನವರ**, ತೃತೀಯ ಬಿ.ಎ



**ಈ ಶಿಬಿರದಲ್ಲಿ ನಾವು ಗೆದ್ದೆವು ಎನ್ನುವುದಕ್ಕಿಂತ ಹೆಚ್ಚಾಗಿ ಹೊಸ ಪರಿಚಯ, ಸ್ನೇಹ, ಒಗ್ಗೂಡಿ ಆಡಿದ ಅದ್ಭುತ ಅನುಭವ ಮತ್ತು ನೆನಪಿನ ಮೂಟೆಯ ಜೊತೆ ಮರಳುವ ಅವಕಾಶ ನಮ್ಮದಾಯಿತು.**

ಯಂತ್ರ ಜಗತ್ತು

# ಅಲ್ಟ್ರಾವಯಲೆಟ್ ಎಫ್ ೯೯ - ದೇಶದ ಮೊದಲ ಅತ್ಯಾಧುನಿಕ ವಿದ್ಯುತ್ ರೇಸಿಂಗ್ ಬೈಕ್

ಭಾರತೀಯ ದ್ವಿಚಕ್ರ ವಾಹನಗಳ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆಯುತ್ತಿರುವ ಅಲ್ಟ್ರಾವಯಲೆಟ್ ಎಫ್‌೯೯, ಭಾರತದ ಮೊದಲ ಅತ್ಯುನ್ನತ-ಕಾರ್ಯಕ್ಷಮತೆಯ ವಿದ್ಯುತ್ ಸ್ಪರ್ಧಾತ್ಮಕ ದ್ವಿಚಕ್ರ ವಾಹನವಾಗಿದೆ. ೫ ವರ್ಷಗಳ ನಿರಂತರ ಸಂಶೋಧನೆ ಮತ್ತು ಅಭಿವೃದ್ಧಿಯ ಫಲವೇ ಈ ಅತ್ಯಾಧುನಿಕ ವಾಹನ. ನೂರಕ್ಕೂ ಹೆಚ್ಚು ಭಾರತೀಯ ಅಭಿಯಂತರರ ಅವಿರತ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ಎಫ್ ೯೯ ಅದ್ಭುತ ಕಾರ್ಯಕ್ಷಮತೆಯನ್ನು ಹೊಂದಿದ್ದು, ೧೨೦ ಹೊರ್ಸ್ ಪವರ್ ಸಾಮರ್ಥ್ಯ ಹೊಂದಿರುವ ಈ ವಾಹನ, ಗಂಟೆಗೆ ೨೬೫ ಕಿಲೋಮೀಟರ್ ವೇಗವನ್ನು ತಲುಪಬಲ್ಲದು. ಇದರ ಅತ್ಯಾಧುನಿಕ ವಾಯುಗತಿಶೀಲ ವಿನ್ಯಾಸ ಮತ್ತು ದ್ರವಶೀತಲಿತ ಅಧಿಕ-ಕಾರ್ಯಕ್ಷಮತೆಯ ವಿದ್ಯುತ್ ಮೋಟರ್ ಈ ವಾಹನದ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ತಂತ್ರಜ್ಞಾನದ ದೃಷ್ಟಿಯಿಂದ ಎಫ್ ೯೯ ಅತ್ಯಂತ ಪ್ರಗತಿಪರವಾಗಿದೆ. ಸುಧಾರಿತ ಉಷ್ಣ ನಿರ್ವಹಣಾ ವ್ಯವಸ್ಥೆ, ಅಧಿಕ-ಸಾಮರ್ಥ್ಯದ ವಿದ್ಯುತ್ಕೋಶ, ಪ್ರಗತ ವಿದ್ಯುತ್ ನಿರ್ವಹಣಾ ವ್ಯವಸ್ಥೆ ಮತ್ತು ಬುದ್ಧಿವಂತ ಸ್ಪರ್ಧಾತ್ಮಕ ವಿದ್ಯುನ್ಮಾನ ವ್ಯವಸ್ಥೆಗಳು ಇದರ ಮುಖ್ಯ ವೈಶಿಷ್ಟ್ಯಗಳಾಗಿವೆ. ಈ ವಾಹನವನ್ನು ಅಂತಾರಾಷ್ಟ್ರೀಯ ವಿದ್ಯುತ್ ಕ್ರೀಡಾ ಸ್ಪರ್ಧೆಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಸ್ಪರ್ಧಾ-ಕೇಂದ್ರಿತ ಅಮಾನತು ವ್ಯವಸ್ಥೆ, ಸ್ಪರ್ಧಾ-ನಿರ್ದಿಷ್ಟ ಚಲನಾ ವಿಧಾನಗಳು ಮತ್ತು ವೃತ್ತಿಪರ ದೂರಸಂವೇದಿ ವ್ಯವಸ್ಥೆ ಇದನ್ನು ನಿಜವಾದ ಸ್ಪರ್ಧಾತ್ಮಕ ವಾಹನವನ್ನಾಗಿ ಮಾಡುತ್ತದೆ. ಎಫ್ ೯೯ ಕೇವಲ ಒಂದು ದ್ವಿಚಕ್ರ ವಾಹನವಲ್ಲ; ಇದು ಭಾರತೀಯ ಅಭಿಯಾಂತ್ರಿಕ ಉತ್ಕೃಷ್ಟತೆಯ ಪ್ರತೀಕವಾಗಿದೆ. ಸಂಪೂರ್ಣವಾಗಿ ಭಾರತದಲ್ಲಿಯೇ ಅಭಿವೃದ್ಧಿಪಡಿಸಲಾಗಿರುವ ಈ ವಾಹನ, ಜಾಗತಿಕ



ಮಾನದಂಡಗಳಿಗೆ ಅನುಗುಣವಾಗಿ ನಿರ್ಮಿಸಲಾಗಿದೆ. ಇದು ಅಂತಾರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಭಾರತದ ತಾಂತ್ರಿಕ ಸಾಮರ್ಥ್ಯವನ್ನು ಪ್ರದರ್ಶಿಸುವ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಭಾರತೀಯ ವಾಹನ ಉದ್ಯಮದ ಭವಿಷ್ಯದ ದಿಕ್ಕನ್ನು ಸೂಚಿಸುವ ಎಫ್ ೯೯, ಜಾಗತಿಕ ಮಟ್ಟದಲ್ಲಿ ಭಾರತೀಯ ಅಭಿಯಾಂತ್ರಿಕ ಪ್ರತಿಭೆಯನ್ನು ಎತ್ತಿ ತೋರಿಸುತ್ತದೆ. ಇದು ಭಾರತದ ವಿದ್ಯುತ್ ವಾಹನ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು ಮಾತ್ರವಲ್ಲ, ಭವಿಷ್ಯದ ದ್ವಿಚಕ್ರ ವಾಹನ ತಂತ್ರಜ್ಞಾನದ ದಿಕ್ಸೂಚಿಯಾಗಿದೆ.

- **ಚಂದ್ರಗುಪ್ತ**

# “ಕಂಪ್ಯೂಟರ್ ತಂತ್ರಜ್ಞಾನ ಮತ್ತು ಕೋಡಿಂಗ್: ಕನ್ನಡದಲ್ಲಿ ಪ್ರೋಗ್ರಾಮಿಂಗ್ ನಿರೂಪಣೆ”

ಇಂದಿನ ಆಧುನಿಕ ಯುಗದಲ್ಲಿ ಕಂಪ್ಯೂಟರ್ ತಂತ್ರಜ್ಞಾನ ಅತ್ಯಗತ್ಯವಾಗಿದ್ದು, ಪ್ರತಿಯೊಂದು ಕೆಲಸದಲ್ಲಿಯೂ ತನ್ನದೆ ಆದ ಕೊಡುಗೆ ನೀಡುತ್ತಲೆ ಇದೆ. ಇಂದಿನ ಯಾಂತ್ರಿಕ ಯುಗದಲ್ಲಿ ಎಲ್ಲವು ಬೆರಳ ತುದಿಯಲ್ಲಿಯೆ ನಡೆಯುತ್ತಿವೆ. ಕಾಲ ಕಾಲಕ್ಕೆ ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಅನೇಕ ವಿಕಾಸಗಳು ನಡೆಯುತ್ತಿವೆ. ಇವುಗಳಲ್ಲಿ ಕಂಪ್ಯೂಟರ್ ಕೋಡಿಂಗ್ ಮುಖ್ಯ ಪಾತ್ರ ವಹಿಸಿಕೊಂಡಿದೆ. ಉದಾಹರಣೆಗೆ ಸಿ, ಸಿ++, ಪೈಥಾನ್, ಜಾವ ಇತರೆ. ಕಂಪ್ಯೂಟರ್ ಪ್ರೋಗ್ರಾಮಿಂಗ್ ಎಂದೂ ಕರೆಯಲ್ಪಡುವ ಕೋಡಿಂಗ್ ಕಂಪ್ಯೂಟರ್ ಗಳು ಅರ್ಥ ಮಾಡಿಕೊಳ್ಳಬಹುದಾದ ಮತ್ತು ಕಾರ್ಯಗತಗೊಳಿಸಬಹುದಾದ ಸೂಚನೆಗಳು ಅಥವಾ ಕೋಡ್ ಅನ್ನು ಕಂಪ್ಯೂಟರ್ ಭಾಷೆಗಳಲ್ಲಿ ಬರೆಯಲಾಗುತ್ತದೆ. ಕೋಡಿಂಗ್ ಮಾನವರು ಕಂಪ್ಯೂಟರ್ ಗಳೊಂದಿಗೆ ಸಂವಹನ ನಡೆಸಲು ಮತ್ತು ಕಾರ್ಯನಿರ್ವಹಿಸಲು ಸಾಫ್ಟ್ವೇರ್ ಗಳನ್ನು ನಿರ್ಮಿಸಲು ಮತ್ತು ಅಪ್ಲಿಕೇಶನ್ ಗಳನ್ನು ರಚಿಸಲೂ, ಸೂಚಿಸಲು ಅನುವು ಮಾಡಿಕೊಡುತ್ತದೆ. ಇದು ಮಾನವ ಓದಬಲ್ಲ ಕಾರ್ಯಗಳನ್ನು, ಯಂತ್ರ ಓದಬಲ್ಲ ಸೂಚನೆಗಳಾಗಿ ಭಾಷಾಂತರಿಸುತ್ತದೆ. ಕನ್ನಡ ಎಲ್ಲಾ ವ್ಯಾಪ್ತಿಗಳಲ್ಲಿಯೂ ತನ್ನ ಛಾಪು ಮೂಡಿಸುತ್ತಿದೆ. ಹೀಗೆ ಕಂಪ್ಯೂಟರ್ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಕೂಡ ಲಗ್ಗೆ ಇಟ್ಟಿದೆ. ಕನ್ನಡದಲ್ಲಿ ಕೋಡಿಂಗ್ ಅನ್ನು ಜಾವಾ ಭಾಷೆಯ ಮೂಲಕ ಎರಡು ಉದಾಹರಣೆಗಳೊಂದಿಗೆ ನೋಡೋಣ.

ಉದಾಹರಣೆ ೧: ತುಂಬಂಕೆಗಳ ಸಂಕಲನ

ತುಂಬಂಕೆ ಕ = ೨; # ತುಂಬಂಕೆ ಎನ್ನುವುದು ಒಂದು ಪೂರ್ಣಾಂಕದ “ ಕ “ ಬೀಜೋಕ್ತಿಯಾಗಿದ್ದು ಇದರ ಮೌಲ್ಯ “ ೨ “.


ತುಂಬಂಕೆ ಕಿ = ೫; # ತುಂಬಂಕೆ ಎನ್ನುವುದು ಒಂದು ಪೂರ್ಣಾಂಕದ “ ಕಿ “ ಬೀಜೋಕ್ತಿಯಾಗಿದ್ದು ಇದರ ಮೌಲ್ಯ” ೫ “.

ಖಾಲಿ ತಯಾರಿಸು ( ) { # ಖಾಲಿ ಎಂಬುದು “ಕಾರ್ಯ”.

ಅನುಕ್ರಮ. ಆರಂಭಿಸು( ೯೬೦೦); # ಅನುಕ್ರಮ ಎನ್ನುವುದು ಮುದ್ರಣ ಮಾಡಲು ಸಹಕಾರಿಯಾಗಿದೆ.


# ೯೬೦೦ ಎನ್ನುವುದು ವೇಗದ ಮಿತಿ.

ತುಂಬಂಕೆ ಕು = ಕ + ಕಿ; # ಈ ಸಾಲು ನಮಗೆ ‘ಕ’ ಮತ್ತು ‘ಕಿ’ ಗಳ ಮೊತ್ತವನ್ನು ನೀಡುತ್ತದೆ.
ಅನುಕ್ರಮ.ವಾಕ್ಯವನ್ನು ಛಾಪಿಸು(ಕು); # ಈ ಸಾಲು ಎರಡು ಸಂಖ್ಯೆಗಳ ಮೊತ್ತವನ್ನು ನೀಡುತ್ತದೆ.
ಈ ಮೇಲಿನ ಉದಾಹರಣೆಯ ಎರಡು ಸಂಖ್ಯೆಗಳ ಮೊತ್ತ “ ೭”.




ಉದಾಹರಣೆ ೨: ತಾರ್ಕಿಕ ಕಾರ್ಯಕ್ರಿಯೆ

```
ತುಂಬಂಕೆ   ಕ = ೭೮;
ತುಂಬಂಕೆ   ಕಿ =೬೫;
ಖಾಲಿ ತಯಾರಿಸು( ) {
ಅನುಕ್ರಮ.ಆರಂಭಿಸು( ೯೬೦೦);
ಆದರೆ ( ಕ < ಕಿ ) {
ಅನುಕ್ರಮ.ವಾಕ್ಯವನ್ನು_ಛಾಪಿಸು( ಕ );
}
ತಪ್ಪಿದ್ದರೆ {
ಅನುಕ್ರಮ.ವಾಕ್ಯವನ್ನು_ಛಾಪಿಸು(ಕಿ);
}}
```




ಈ ಮೇಲಿನ ಉದಾಹರಣೆಯು ಸನ್ನಿವೇಶಗಳ ಪ್ರಕಾರ ಮೊತ್ತವನ್ನು ಮುದ್ರಣ ಮಾಡುತ್ತದೆ. “ಕ” ಎಂಬುದು “ಕಿ” ಗಿಂತ ಕಡಿಮೆ ಇದ್ದರೆ “ ಕ “ ಎಂಬ ಬೀಜೋಕ್ತಿಯ ಬೆಲೆಯು ಮುದ್ರಣವಾಗುತ್ತದೆ. ಅದು ತಪ್ಪಿದ್ದರೆ “ಕಿ” ಎಂಬ ಬಿಜೋಕ್ತಿಯ ಬೆಲೆ ಮುದ್ರಣಗೊಳ್ಳುತ್ತದೆ. ಈ ಉದಾಹರಣೆಯಲ್ಲಿ ಮೊದಲನೇ ಸನ್ನಿವೇಶ ತಪ್ಪಾಗಿದ್ದು, ಎರಡನೇ ಸನ್ನಿವೇಶವು ಸರಿಯಾಗಿದ್ದು, “೬೫” ಎಂಬ ಮೌಲ್ಯ ಮುದ್ರಣವಾಗುತ್ತದೆ.

### ಕೋಡಿಂಗ್ ಮಾಡಲು ಮುಖ್ಯವಾಗಿ ಬೇಕಾಗುವ ಕೆಲವು ಪದಗಳ ಅರ್ಥ

loop = ಸುತ್ತು    setup = ತಯಾರಿಸು

if = ಆದರೆ    else = ತಪ್ಪಿದರೆ

while = ಆಗುವಾಗ    for = ಕ್ರಮವಾಗಿ

switch = ಆರಿಸು    case = ಇದಾದರೆ

continue = ತೊಡಗು    break = ಒಡೆ

return = ಹಿಂದಿರುಗಿಸು    default = ಯಾವುದಾದರೂ

final = ಅಂತಿಮ    throw = ಬೀಸು

float = ನನಸಂಕೆ    double = ದೊಡ್ಡ_ನನಸಂಕೆ

catch = ಹಿಡಿ    try = ಪ್ರಯತ್ನಿಸು

class = ವರ್ಗ    word = ಪದ

new = ಹೊಸ    delete = ಅಳಿಸು
auto = ತಾನಾಗಿ    int8_t = ತುಂಬಂಕೆ_8

define = ವಿವರಿಸು    include = ಒಳಗೊಳ್ಳು

void = ಖಾಲಿ    int = ತುಂಬಂಕೆ

long = ದೊಡ್ಡ    short = ಚಿಕ್ಕ

**- ತೇಜಸ್ ಎಸ್.**, ದ್ವಿತೀಯ ಬಿಸಿಎ.
**- ವಿಕಾಸ್ ವಿ.** ದ್ವಿತೀಯ ಬಿ.ಕಾಂ

# ಕನ್ನಡದ ಸೆಳವಿಗೆ ಹೊಸ ಅರಿವು -" ಕಲಿಕನ್ನಡ " ನೂತನ ಪ್ರಯತ್ನ

ಕನ್ನಡದ ಕಂಪು ಗಡಿನಾಡಿನಾಚೆಗೂ ಹಬ್ಬಿದೆ. ಭಾರತದ ಹಲವು ರಾಜ್ಯಗಳ ಸಿನಿಮಾ ರಂಗದಲ್ಲಿ ದುಡಿಯುತ್ತಿರುವ ಪ್ರಖ್ಯಾತ ನಟ ನಟಿಯರು ಕನ್ನಡ ನಾಡಿನವರೆ. ಭಾರತದಲ್ಲಿ ಅತಿ ಹೆಚ್ಚು ಮಾತನಾಡುವ ಭಾಷೆಗಳಲ್ಲಿ ಕನ್ನಡ ಎಂಟನೇ ಸ್ಥಾನವನ್ನು ಪಡೆದಿದೆ. ಜಗತ್ತಿನಾದ್ಯಂತ ಹಲವಾರು ದೇಶಗಳಲ್ಲಿ ಕನ್ನಡಿಗರು ನೆಲೆ ನಿಂತಿದ್ದರೂ ತಮ್ಮ ಕನ್ನಡತನದ ಅಸ್ಮಿತೆಯನ್ನು ಕಾಪಾಡಿಕೊಂಡಿದ್ದಾರೆ. ಸಾಗರದ ಆಚೆ ಇರುವ ಜಪಾನಿಗನೂ ಕನ್ನಡವನ್ನು ಸುಲಲಿತವಾಗಿ ಮಾತನಾಡಬಲ್ಲ ಉದಾಹರಣೆಗಳಿವೆ. ಬೆಂಗಳೂರಲ್ಲಿರುವ ವಿದೇಶಿ ಮೂಲದ ಯುವತಿ ಕನ್ನಡಿಗರು ನಾಚಿಕೊಳ್ಳುವಂತೆ ನಿರರ್ಗಳವಾಗಿ ಕನ್ನಡದಲ್ಲಿ ಸಂಭಾಷಿಸಬಲ್ಲಳು. ಆದರೆ ಈ ನಾಡಲ್ಲೇ ಇರುವ, ಹಲವು ವರ್ಷಗಳಿಂದ ಇಲ್ಲೇ ವಾಸಿಸುತ್ತಿರುವ ಬೇರೆ ರಾಜ್ಯಗಳಿಂದ ವಿದ್ಯಾರ್ಜನೆಗೋ, ಧನಾರ್ಜನೆಗೋ ಬಂದ ಇತರ ಭಾರತೀಯರೇಕೆ ಕನ್ನಡವನ್ನು ಕಲಿಯುತ್ತಿಲ್ಲ? ಈ ಒಂದು ಆಲೋಚನೆಯಿಂದ ನಮ್ಮ ಚಾಣಕ್ಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾದ ಶ್ರೀ ಕೇಶವಚಂದ್ರ ಇವರ ಸಾರಥ್ಯದಲ್ಲಿ ಈ ಸುಂದರ ಭಾಷೆಯನ್ನು ಕನ್ನಡೇತರರಿಗೆ ಕಲಿಸುವ ವಿನೂತನ ಪ್ರಯತ್ನವೇ ಕಲಿ ಕನ್ನಡ.

ಭಾರತದ ವಿವಿಧ ರಾಜ್ಯಗಳಿಗೆ ಸೇರಿದ ಚಾಣಕ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕನ್ನಡವನ್ನು ತಮ್ಮ ಭಾಷಾ ವಿಷಯವನ್ನಾಗಿ ಆಯ್ದುಕೊಂಡಿದ್ದಾರೆ. ಅಂದಹಾಗೆ ಇದರಲ್ಲೂ ಒಂದು ವಿಶೇಷವಿದೆ. ಆಗಲೇ ಹೇಳಿದಂತೆ ಹಲವಾರು ವಿದೇಶಿಗರು ಕನ್ನಡದ ಮೋಡಿಗೆ ಒಳಗಾಗಿದ್ದಾರೆ. ಅವರ ಸಾಲಿಗೆ ಸೇರುವ ಕೀನ್ಯಾದ ಪ್ರಜೆಯಾದ ನಿಕೋಲ್ ಅವರು ಅತ್ಯಂತ ಉತ್ಸಾಹದಿಂದ ಕನ್ನಡವನ್ನು ಕಲಿಯುತ್ತಿದ್ದಾರೆ. ಕನ್ನಡ ರಾಜ್ಯೋತ್ಸವದ ದಿನ ತಮ್ಮ ಸುಮಧುರವಾದ ಕಂಠದಿಂದ ಸವಿಗನ್ನಡದ ಗೀತೆಯನ್ನು ಹಾಡಿ ಎಲ್ಲರ ಮನರಂಜಿಸಿದ್ದಾರೆ. " ನಾನು ಸುಮಾರು 20 ವರ್ಷಗಳಿಂದ ಬೆಂಗಳೂರಲ್ಲಿ ವಾಸಿಸುತ್ತಿದ್ದೇನೆ. ಆದರೂ ನನಗೆ ಕನ್ನಡ ಬರುತ್ತಿರಲಿಲ್ಲ. ಈ ಕಲಿಕನ್ನಡ ತರಗತಿಯನ್ನು ಸೇರಿದ ಬಳಿಕ ನಾನು ಕನ್ನಡವನ್ನು ಗ್ರಹಿಸಬಲ್ಲೆ, ಕೆಲವು ಪದಗುಚ್ಛಗಳನ್ನು ಬಳಸಬಲ್ಲೆ, ಹಾಗೂ ಹಲವು ವಾಕ್ಯಗಳನ್ನು ರಚಿಸಬಲ್ಲೆ" ಇದು ಪ್ರಥಮ ವರ್ಷ ಬಿಬಿಎ ವಿದ್ಯಾರ್ಥಿನಿ ನತಾಶ ಕುಮಾರ್ ಅವರ ಅಭಿಪ್ರಾಯ.

ಈ ತರಗತಿಗೆ ಸೇರಿದ ವಿದ್ಯಾರ್ಥಿಗಳಲ್ಲಿ ಬಹುತೇಕರು ಬೆಂಗಳೂರಲ್ಲಿ ವಾಸವಿದ್ದರೂ ಕನ್ನಡವನ್ನು ಮಾತನಾಡ ದವರು, ಕಲಿಯದವರು. "ನೀವು ಈಗ ಕನ್ನಡವನ್ನು ಕಲಿಯುವ ಉದ್ದೇಶವಾದರೂ ಏನು? ಅದರ ಹಿಂದೆ ಇರುವ ಪ್ರೇರಣೆಯಾದರೂ ಏನು? "ಎಂದು ಕೇಳಿದಾಗ ಹರಿದು ಬಂದ ಉತ್ತರ "ಸಂಭಾಷಣೆ, ಮುಖ್ಯವಾಗಿ ಹೊರಗೆ ಎಲ್ಲಿಗಾದರೂ ತಿರುಗಾಟಕ್ಕೆ ಹೊರಟಾಗ ಇಲ್ಲಿನ ಜನರ ಬಳಿ ಸಂಭಾಷಿಸುವಷ್ಟು ಸ್ಪಷ್ಟವಾಗಿ ಕನ್ನಡವನ್ನು ಕಲಿಯುವುದು, ಪ್ರತಿದಿನದ ಕಾರ್ಯಾಲಾಪಗಳು ಸರಾಗವಾಗಿ ಸಾಗುವಷ್ಟು ಕನ್ನಡವನ್ನು ಬಳಸುವುದೇ ಮುಖ್ಯ ಉದ್ದೇಶ. ಬಹುತೇಕ ಬೆಂಗಳೂರಿನ ಕನ್ನಡಿಗರೇ ತಮ್ಮ ನಿತ್ಯದ ಸಂಭಾಷಣೆಗಾಗಿ ಕನ್ನಡವನ್ನು ಬಳಸದಿರುವ ಈ ಕಾಲದಲ್ಲಿ, ಈ ಊರಲ್ಲಿ ಇದ್ದೇವೆಂಬ ಒಂದೇ ಕಾರಣದಿಂದ ಈ ನೆಲದ ಭಾಷೆಯನ್ನು ಕಲಿಯುವುದು ಪ್ರಶಂಸನೀಯವಲ್ಲವೇ?
"ಕನ್ನಡದಲ್ಲಿ ಕಾಲಸೂಚಕಗಳನ್ನು ಅರ್ಥ ಮಾಡಿಕೊಳ್ಳುವುದು ಸ್ವಲ್ಪ ಸಂಕೀರ್ಣ ಎನಿಸುತ್ತದೆ, ಉಳಿದಂತೆ ಇತರೇ ಕಲಿಕೆ ಉತ್ತಮವಾಗಿ ಸಾಗಿದೆ" ಎನ್ನುತ್ತಾರೆ ಕೀನ್ಯಾದ ಕೋಗಿಲೆ ನಿಕೋಲ್. "ಈ ಕಲಿಕನ್ನಡದ ತರಗತಿಗಳು ಅತ್ಯುತ್ತಮವಾಗಿ ಸಾಗುತ್ತಿದೆ.

ನಮ್ಮ ಪ್ರಾಧ್ಯಾಪಕರಾದ ಶ್ರೀಯುತ ಕೇಶವಚಂದ್ರ ಅವರ ತಾಳ್ಮೆ ಮೇಲ್ಮಟ್ಟದ್ದು. ನಾವು ಸ್ವತಃ ಕನ್ನಡ ಮಾತನಾಡಲು ಪ್ರಯತ್ನಿಸಿ, ವಾಕ್ಯರಚಿಸಲಾಗದೆ ಕಷ್ಟಪಡುವಾಗ, ನಮಗೆ ಸಹಾಯ ಮಾಡುತ್ತಾರೆ. ನಮಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಪಾಠವನ್ನು ಮಾಡುತ್ತಾರೆ. ಒಟ್ಟಾರೆ ಈ ತರಗತಿ ಆಹ್ಲಾದಕರವಾದದ್ದು. " ಇದು ಕಲಿಕನ್ನಡ ತರಗತಿಯ ಬಗ್ಗೆ ಇರುವ ಧನಾತ್ಮಕವಾದ ಅಭಿಪ್ರಾಯಗಳು.

"ತರಗತಿಗಳನ್ನು ದಯವಿಟ್ಟು ನಾಲ್ಕರಿಂದ ಐದು ಗಂಟೆ ಬದಲಿಗೆ ನಮಗೆ ಬಿಡುವಿರುವ ಸಮಯದಲ್ಲಿ ಇರಿಸಿ. ದಿನವಿಡೀ ವಿವಿಧ ತರಬೇತಿಗಳು ನಡೆದ ಬಳಿಕ ಕಲಿಕನ್ನಡದ ತರಗತಿಯನ್ನು ಇಡಲಾಗುತ್ತಿದೆ. ಇದರಿಂದ ನಮಗೆ ತರಗತಿಯಲ್ಲಿ ಗಮನ ಹರಿಸಲು ಬಹಳ ಕಷ್ಟವಾಗುತ್ತಿದೆ. ಎಂಬುದೊಂದೇ ಈ ಎಲ್ಲ ವಿದ್ಯಾರ್ಥಿಗಳ ಅಹವಾಲು. ನಮ್ಮ ಮಾತೃಭಾಷೆಯ ಮೇಲೆ ಅಭಿಮಾನವಿರುವುದು ಸಹಜ. ಆದರೆ ನಮ್ಮದಲ್ಲದ ಒಂದು ಭಾಷೆಯನ್ನು ನಮ್ಮದಾಗಿಸಿಕೊಳ್ಳುವ ಪ್ರಯತ್ನಕ್ಕೆ ತಲೆಬಾಗಲೇಬೇಕು. ಮುಖ್ಯವಾಗಿ ರಾಜಧಾನಿಯಲ್ಲಿ ಕನ್ನಡ ಭಾಷೆಯನ್ನು, ಕನ್ನಡತನವನ್ನು ಉಳಿಸಿಕೊಳ್ಳುವ ಸಲುವಾಗಿ ಹೋರಾಟಗಳು ಹೆಚ್ಚಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಒಂದು ಭಾಷೆ ನಿಂತ ನೀರಾಗಬಾರದು ನಿರಂತರವಾಗಿ ಪ್ರವಹಿಸುತ್ತಿರುವ ನದಿಯಂತಿರಬೇಕು. ಸಾಧನೆಯ ಹಾದಿಯಲ್ಲಿನ ಈ ಹೆಜ್ಜೆ ಒಂದು ಸಂಸ್ಕೃತಿಯ ಉಳಿವಿನ ಭದ್ರಬುನಾದಿ. ಇಂತಹ ಕಾರ್ಯಗಳು ಇನ್ನೂ ಮುಂದುವರೆಯಲಿ ಎನ್ನುವುದೇ ಎಲ್ಲರ ಆಶಯ.

**- ಧನ್ವಿ ಡಿ. ಸುವರ್ಣ**, ಪ್ರಥಮ ಬಿ.ಎ.

# ಸ್ನೇಹಾಂತರಂಗ

ಅವನು ನನ್ನ ಬಾಲ್ಯಸ್ನೇಹಿತ. ನನಗೆ ನೆನಪಿರುವಂತೆ, ನಾನು ಮಗುವಾಗಿದ್ದಾಗಿನಿಂದಲೇ ಅವನು ನನ್ನ ಗೆಳೆಯನಾಗಿದ್ದ. ಇಬ್ಬರೂ ಸೇರಿ ಅದೆಷ್ಟು ಆಟವಾಡಿ ಕಾಲಕಳೆಯುತ್ತಿದ್ದೆವೋ! ಇಂಥದೇ ಆಟವೆಂದಲ್ಲ, ಏನೇ ಮಾಡಿದರೂ ನಮಗೆ ಅದೊಂದು ಆಟವೇ. ಒಟ್ಟಿನಲ್ಲಿ ಸಂತೋಷದಿಂದ ಕಾಲ ಕಳೆಯಬೇಕೆಂಬುದಾಗಿತ್ತು. ಹಾಗಾಗಿ ಎಲ್ಲದರಲ್ಲಿಯೂ ಸಂತೋಷವನ್ನು ಕಾಣುತ್ತಿದ್ದೆವು. ಈಗಲೂ ಅವನ ಜೊತೆಗಿದ್ದ ಸಾಕಷ್ಟು ನೆನಪುಗಳು ಮನಸ್ಸಲ್ಲಿ ಹಚ್ಚ ಹಸಿರಾಗಿ ಉಳಿದಿವೆ.

ಹಾಗೇ ಕೆಲವು ವರ್ಷಗಳು ಕಳೆದವು. ನಮ್ಮಿಬ್ಬರಿಗೂ ಶಾಲೆಗೆ ಹೋಗುವ ವಯಸ್ಸು. ಆದರೂ ನಮ್ಮ ಸ್ನೇಹಕ್ಕೆ ಮಾತ್ರ ಯಾವುದೇ ಲೋಪವಾಗಲಿಲ್ಲ. ಶೈಶವದಿಂದ ಬಾಲ್ಯಕ್ಕೆ ಬಂದರೂ ಅದೇ ಗೆಳೆತನ, ಅದೇ ಆಟ. ಶಾಲೆ ಸೇರಿದ್ದರಿಂದ ಆಟದ ಜೊತೆಗೆ ಪಾಠವೂ ಸೇರಿತ್ತು. ಆದರೇನು? ಅವನು ಓದುವುದರಲ್ಲಿಯೂ ನನ್ನ ಮೆಚ್ಚಿನ ಗೆಳೆಯನಾಗಿದ್ದ. ಅದು ಶಾಲೆಯ ಕೆಲಸ ಇರಲಿ, ಮನೆಯ ಕೆಲಸವೇ ಆಗಲಿ, ಇಬ್ಬರೂ ಒಟ್ಟಿಗೆ ಸೇರಿ ಕೆಲಸ ಮಾಡುತ್ತಿದ್ದೆವು. ಆ ಸಹಚರ್ಯೆಯಲ್ಲೊಂದು ಆನಂದವಿತ್ತು. ನಾವಿಬ್ಬರೂ ಒಂದೇ ಜೀವದಂತಿದ್ದೆವು. ಆ ಮಧುರ ಕ್ಷಣಗಳನ್ನು ಮೆಲಕು ಹಾಕಿದರೆ... ಆಹಾ!



ಕಾಲಚಕ್ರ ಉರುಳಿತು. ಬಾಲಕರಾಗಿದ್ದ ನಾವು ಪ್ರೌಢಾವಸ್ಥೆಗೆ ಕಾಲಿಡುವ ಕಾಲವದು. ಯಾರ ದೃಷ್ಟಿ ತಗುಲಿತೋ ಅಥವಾ ಕಾಲದ ಮಹಿಮೆಯೋ ಗೊತ್ತಿಲ್ಲ, ನಮ್ಮ ಗಟ್ಟಿಯಾದ ಗೆಳೆತನದಲ್ಲಿ ಒಂದು ಬಿರುಕು ಮೂಡಿತ್ತು. ನನಗೆ ನನ್ನ ಮಿತ್ರನ ಬಗ್ಗೆ ಅಸಡ್ಡೆ, ತಿರಸ್ಕಾರ ಶುರುವಾಗಿತ್ತು, ಅವನನ್ನು ಬಹಳ ಕಡೆಗಣಿಸಿದೆ. ಅವನೂ ಕೂಡ ತನ್ನ ಬಾಲ್ಯ ಮಿತ್ರನ ಬಗ್ಗೆ ಹೆಚ್ಚಾಗಿ ಕಾಳಜಿ ತೋರಿಸುತ್ತಿರಲಿಲ್ಲ. ಬುದ್ಧಿ ಬೆಳೆದು "ದೊಡ್ಡವರಾಗಿ ಬಿಟ್ಟೆವಲ್ಲ!?" ಹೊಸ ಜನರು ಪರಿಚಯವಾದರು, ಹೊಸ ಮಿತ್ರರು ಸಿಕ್ಕಿದರು, ಅವರ ಸ್ನೇಹದ ನಡುವೆ ನನ್ನ ಬಾಲ್ಯದ ಗೆಳೆಯನ ನೆನಪೂ ಆಗಲಿಲ್ಲ. ನಮ್ಮ ಬಾಂಧವ್ಯ ಕರಗುತ್ತಿತ್ತು. ಎಲ್ಲೋ ಒಮ್ಮೊಮ್ಮೆ ಅವನೊಂದಿಗೆ ಮುಂಚಿನ ವಿಶ್ವಾಸದಲ್ಲಿ ಮಾತುಕತೆ ನಡೆಯುತ್ತಿತ್ತಾದರೂ, ಮುಂಚಿನಷ್ಟಿರಲಿಲ್ಲ. ಬೇಗ ಅವನ ಬಗ್ಗೆ ತಿರಸ್ಕಾರ ಮೂಡುತ್ತಿತ್ತು. ಅವನೂ ನನ್ನ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಳ್ಳಲಿಲ್ಲ. ಬಹುಶಃ ಅಷ್ಟು ವರ್ಷದ ಸಲುಗೆಯೇ ನಾನು ಅವನನ್ನು ಉಪೇಕ್ಷೆ ಮಾಡಲು ಕಾರಣವಾಗಿತ್ತಾ? ಗೊತ್ತಿಲ್ಲ!

ಜೀವನದಲ್ಲಿ ಮತ್ತಷ್ಟು ವರ್ಷಗಳು ಕಳೆದವು. ಈಗ ಇಬ್ಬರೂ ಯೌವನಾವಸ್ಥೆಯಲ್ಲಿದ್ದೇವೆ. ಸಮಾಜದ ದೃಷ್ಟಿಯಲ್ಲಿ ಯುವಕರು. ಶಾಲೆಯಿಂದ ಕಾಲೇಜು ಮೆಟ್ಟಿಲು ಹತ್ತಿ, ಪದವಿಯನ್ನು ಮುಗಿಸಿ, ನೌಕರಿ ಸೇರುವ ಘಟ್ಟದಲ್ಲಿದೆ ಜೀವನ. ಆದರೆ ಇಷ್ಟು ವರ್ಷಗಳಲ್ಲಿ ನನ್ನ ಜೀವನದಲ್ಲಿ ಅದೆಷ್ಟೋ ರೀತಿಯ ಗೆಳೆಯರು ಬಂದು ಹೋಗಿದ್ದಾರೆ: ನಿಜವಾದ ಗೆಳೆಯರು, ತಮ್ಮ ಸ್ವಾರ್ಥಕ್ಕಾಗಿ ಗೆಳೆತನ ಮಾಡಿದವರು, ಪರೀಕ್ಷೆಯಲ್ಲಿ ಮಾತ್ರ ಗೆಳೆಯರು, ಮಿಂಚಿನಂತೆ ಬಂದು ಮರೆಯಾದ ಗೆಳೆಯರು, ಆಕಸ್ಮಿಕವಾಗಿ ಎದುರಾದಾಗ "ಓ! ನಿನ್ನನ್ನು ಎಲ್ಲೋ ನೋಡಿದ ನೆನಪು" ಎಂದು ಹೇಳುವ ಗೆಳೆಯರು....ಹೀಗೆ ಇವರೆಲ್ಲರ ಮಧ್ಯೆ ನನ್ನ ಬಾಲ್ಯದ 'ಆ' ಗೆಳೆಯನ ಗೈರು ಕಾಡುತ್ತಿತ್ತು. ಅವನನ್ನು ಕಳೆದುಕೊಂಡೆನಲ್ಲ ಎಂದು ಪಶ್ಚಾತ್ತಾಪ ಪಡುವಂತಾಗಿತ್ತು. ಅವನನ್ನು ನಾನು ಉಪೇಕ್ಷಿಸಬಾರದಿತ್ತು. ಪ್ರೀತಿಪಾತ್ರರಾದವರನ್ನು ಕಳೆದುಕೊಂಡಾಗಲೇ ನಮಗೆ ಅವರ ಮೌಲ್ಯ ತಿಳಿಯುವುದು!

ಎಷ್ಟೋ ವರ್ಷಗಳ ಕಾಲ ಅವನಿಗಾಗಿ ಹುಡುಕಿದೆ. ಜೊತೆಯಲ್ಲಿಯೇ ಇದ್ದರೂ ದೂರವಾಗಿದ್ದ ಅವನಿಗಾಗಿ ನಾನು ಹಂಬಲಿಸುತ್ತಿದ್ದೆ. ಅವನ ಪವಿತ್ರವಾದ ಗೆಳೆತನಕ್ಕಾಗಿ ಕಾಯುತ್ತಿದ್ದೆ. ಆಮೇಲೇನಾಯಿತು ಗೊತ್ತೇ? ಅದೊಂದು ದಿನ ನಾನು ಏಕಾಂಗಿಯಾಗಿದ್ದಾಗ ಅವನು ಸಿಕ್ಕಿದ! ಇಷ್ಟು ವರ್ಷಗಳ ಕಾಲ ಯಾರಿಗಾಗಿ ನಾನು ಹಂಬಲಿಸುತ್ತಿದ್ದೆನೋ ಆ ನನ್ನ ಜೀವದ ಗೆಳೆಯ ನನಗೆ ಪುನಃ ಸಿಕ್ಕಿದ. ನನ್ನ ಜೀವನದಲ್ಲಿ ನನ್ನ ಮಿತ್ರ ಮರಳಿ ಬಂದ. ಆ ದೇವರಿಗೆ ಅದೆಷ್ಟು ಕೃತಜ್ಞನಾಗಿದ್ದೇನೆ ಗೊತ್ತೇ!

ಅವನು ಮತ್ತೆ ಸಿಕ್ಕಿದ ಆನಂದವನ್ನು ಮಾತಲ್ಲಿ ಹೇಳಲಾರೆ. ಆದರೆ ಆಶ್ಚರ್ಯವೆಂದರೆ ನಮ್ಮ ಪುನರ್ಮಿಲನಕ್ಕೆ ಆನಂದದಿಂದ ಕಣ್ಣೀರು ಬರಲಿಲ್ಲ, ಸ್ನೇಹದ ಅಪ್ಪುಗೆಯೂ ಆಗಲಿಲ್ಲ, ನೇರವಾಗಿ ಒಂದು ಮಾತು ಕೇಳಿದೆ, "ಗೆಳೆಯ! ನನ್ನ ಜೊತೆಗೆ ಮತ್ತೆ ಸ್ನೇಹ ಬೆಳೆಸುವೆಯಾ? ಮತ್ತಷ್ಟು ಮಧುರ ಕ್ಷಣಗಳನ್ನು ಕಳೆಯುವೆಯಾ? ನನ್ನನ್ನು ಗುರುವಾಗಿ ತಿದ್ದಬಲ್ಲೆಯ? ನನ್ನ ಕಷ್ಟಕ್ಕೆ ಹೆಗಲಾಗುವೆಯಾ? ಆಣೆ ಮಾಡಿ ಹೇಳುತ್ತೇನೆ, ನಿನ್ನನ್ನು ಇನ್ನೆಂದೂ ಕಡೆಗಣಿಸುವುದಿಲ್ಲ. ಬಾಲ್ಯದಲ್ಲಿದ್ದ ಅದೇ ಮಿತ್ರನಾಗಿರುತ್ತೇನೆ. ಇಷ್ಟು ವರ್ಷ ನೀನು ಕಳೆದುಕೊಂಡಿದ್ದ ಸ್ನೇಹವನ್ನು ಒಟ್ಟಿಗೆ ಧಾರೆಯೆರೆಯುತ್ತೇನೆ. ನಾನು-ನೀನು ಎಂಬುದನ್ನು ಅಳಿಸಿ "ನಾವು" ಎನ್ನುವಂತೆ ಪುನಃ ಸ್ನೇಹದ ಬಾಂಧವ್ಯ ಬೆಳೆಸೋಣವೇ?"

ಅವನು ಏನೂ ಮಾತನಾಡಲಿಲ್ಲ. ಕೆಲವು ಕಾಲ ಮೌನವಾಗಿದ್ದನು. ನಾನೂ ಕಾತರದಿಂದ ಅವನ ಮಾತಿಗೆ ಕಾಯುತ್ತಿದ್ದೆ. ಎರಡು ನಿಮಿಷ ಕಳೆಯಿತು, ಒಂದು ಧ್ವನಿ ಕೇಳಿಬಂತು. ಗಮನವಿಟ್ಟು ಆಲಿಸಿದೆ, "ನಾನೆಂದೆಂದೂ ನಿನ್ನ ಗೆಳೆಯನೆ" ಎಂಬ ಮಾತು ಕೇಳಿತು. ನನ್ನ ಅಂತರಂಗವು ಆ ಮಾತು ಹೇಳಿದಾಗ ನನಗಾದ ಆನಂದ..ಆಹ್! ಅದಕ್ಕೆ ಪಾರವೇ ಇರಲಿಲ್ಲ!

ಈಗ ಹೇಳಿ, ನೀವೂ "ನಿಮ್ಮ ಬಾಲ್ಯದ ಗೆಳೆಯ"ನನ್ನೇನಾದರೂ ಕಳೆದುಕೊಂಡಿದ್ದೀರಾ? ಅಥವಾ ಅವನು ಈಗಲೂ ನಿಮ್ಮ ಜೊತೆಯಲ್ಲಿಯೇ ಇದ್ದಾನೆಯೇ?

**-ಎಸ್. ಚೇತನ್**, ಸಂಶೋಧನಾ ವಿದ್ಯಾರ್ಥಿ

---

# ಮೊದಲುಗಳು..

೧. ಕನ್ನಡದ ಮೊದಲ ಲಕ್ಷಣ ಗ್ರಂಥ ಯಾವುದು?
೨. ಕನ್ನಡದ ಮೊದಲ ನಾಟಕ ಯಾವುದು?
೩. ಕನ್ನಡದ ಮೊದಲ ಮಹಮದೀಯ ಕವಿ ಯಾರು?
೪.ಕನ್ನಡದ ಮೊದಲ ಕಾವ್ಯ ಯಾವುದು?
೫.ಪಂಪಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಯಾರು?

**ಹಿಂದಿನ ಸಂಚಿಕೆಯ ಉತ್ತರಗಳು: - ೦೧**

1. ಬೆಂಗಳೂರು
2. ವರಾಹಿ ಭೂಗರ್ಭ ವಿದ್ಯುದಾಗಾರ
3. ಪಂಜೆ ಮಂಗೇಶರಾಯರ ನನ್ನ ಚಿಕ್ಕತಾಯಿ (1900)
4. ವಡ್ಡಾರಾಧನೆ
5. ರಾಷ್ಟ್ರಕವಿ ಕುವೆಂಪು

---

ಹುಡುಕಿದೆ, ಹುಡುಕಿದೆ ಎಲ್ಲ
ಜಗವನು ಸುತ್ತಿ ಸುತ್ತಿ,
ನೀ ಸಿಗದ ಕಾರಣಕ್ಕೆ ಬರುತ್ತಿದೆ
ಕೋಪವು ಎತ್ತಿ,
ನೀ ಕಳೆದಾಗ ಆದ ನೋವು ಸಂಕಟ
ತಿರುಗಿಸಿದೆ ನಿನ್ನನು ಪ್ರೀತಿಯಿಂದ
ದ್ವೇಷಕೆ
ನಿನ್ನ ಜೊತೆ ಕಳೆದ ಆ ಕ್ಷಣಗಳು
ಮಧುರ ಸವಿ ನೆನಪುಗಳು ಮತ್ತೆ
ಕರೆದಿವೆ ಹಿಂದಿರುಗಿ ಬರಲೆಂದು

ನೀ ಬಿಟ್ಟು ಹೋದ ಘಟನೆ ತರುತಿದೆ
ತಾಪ
ನೆನೆಸಿದರೆ ಬರುತ್ತಿದೆ ಈಗಲೂ
ಕೋಪ
ಎಷ್ಟು ಹುಡುಕಿದರೂ ಸಿಗದ ನಿನ್ನನು
ಮರಳಿ ಬೇಕೆನ್ನುತ್ತಿದೆ ನನ್ನ ಮನವಿನ್ನು

ನೀ ಎದುರಾದರೆ ನಾ ಮಾತಾಡದೇ
ನಿನ್ನನೇ ನೋಡಲು
ಅನುಮತಿಸುವೆಯಾ?
ನೀ ಮರೆಯಾದರೂ ನನ್ನ
ಆಲೋಚನೆಯು
ನಿನ್ನ ಹಿಂಬಾಲಿಸದಂತೆ
ತಡೆಯಬಲ್ಲೆಯಾ?

**- ಮೋಹನ್ ಜಿ,** ಪ್ರಥಮ ಬಿ.ಕಾಂ

# ವಿಶ್ವವಿದ್ಯಾಲಯದಲ್ಲಿ ರಾಜ್ಯೋತ್ಸವದ ರಂಗೋಲಿ!

ಹಳದಿ ಮತ್ತು ಕೆಂಪು ಬಣ್ಣದ ರಂಗು ಇಡೀ ಚಾಣಕ್ಯ ವಿಶ್ವವಿದ್ಯಾಲಯದಲ್ಲಿ ಹರಡಿತ್ತು. ನವೆಂಬರ್ ೧ ರಂದು ಉಕ್ಕೇರಬೇಕಿದ್ದ ಉತ್ಸಾಹ ೬ ದಿನಗಳು ಅಂದರೆ ನವೆಂಬರ್ ೭ರಂದು ಪುಟಿದು ಹೊರಬಂತು. ಸರಿಸುಮಾರು ೬ ಘಂಟೆಗೆ ಆರಂಭವಾದ ಕನ್ನಡಿಗರ ಸಂಭ್ರಮ ಸಂಜೆ



೫ ಗಂಟೆಯಾದರೂ ಮುಕ್ತಾಯವಾಗುವ ಮಾತೇ ಇರಲಿಲ್ಲ. ಸಭಾ ಕಾರ್ಯಕ್ರಮದಲ್ಲಿ ಉಪಕುಲಪತಿಗಳಾದ ಶ್ರೀಯುತ ಯಶವಂತ ಡೋಂಗ್ರೆಯವರು ತಮ್ಮ ಕನ್ನಡ ಪ್ರೇಮವನ್ನು ತಮ್ಮ ಮಾತುಗಳ ಮೂಲಕ ವ್ಯಕ್ತಪಡಿಸಿದರು. ಮುಖ್ಯ ಆಹ್ವಾನಿತರಾದ ಸುನೀಲ ಪುರಾಣಿಕ ಅವರ ಭಾಷಣ, ಅವರ ಅನುಭವ ಶ್ರೀಮಂತಿಕೆಗೆ ಸಾಕ್ಷಿಯಾಗಿತ್ತು. ಸಭಾಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿ ಬಂತು. ಸಾಂಸ್ಕೃತಿಕ ಕಾರ್ಯಕ್ರಮದ ಸೌಂದರ್ಯವನ್ನು ಏನೆಂದು ವರ್ಣಿಸಲಿ? ವಿವಿಧ ಪರಂಪರಾಗತ ಉಡುಗೆ ತೊಡುಗೆಗಳೊಂದಿಗೆ ವಿದ್ಯಾರ್ಥಿಗಳು ಕಂಗೊಳಿಸುತ್ತಿದ್ದರು. ನಮ್ಮ ದೇಶದಾಚೆಗಿನ ಕನ್ನಡಿತಿಯಾದ ನಿಕೋಲ್ ತನ್ನ ಸುಮಧುರ ಕಂಠದಿಂದ ಕನ್ನಡ ತಾಯಿಯ ಗುಣಗಾನ ಹಾಡಿದಾಗ ಕನ್ನಡಿಗರಲ್ಲಿ ಅದು ಉತ್ಸಾಹದ ಅಲೆಯೆಬ್ಬಿಸಿತು. ಹಿತಾ ತನ್ನ ಹಿತವಾದ ಗಾಯನದಿಂದ ನೆರೆದ ಎಲ್ಲರ ಮನ ದಣಿಸಿದಳು.

ಕನ್ನಡ ಕುವರ ಮತ್ತು ಕುವರಿಯರು ಕನ್ನಡದ ಪ್ರೀತಿಯನ್ನು ತಮ್ಮ ನೃತ್ಯ, ನಾಟ್ಯ ಮತ್ತು ಗಾಯನಗಳಲ್ಲಿ ಪ್ರದರ್ಶಿಸಿದರು. ಕನ್ನಡದ ಮೊದಲ ದೊರೆ ಮಯೂರವರ್ಮನ ಸಾಹಸಗಾಥೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಅನುರಣಿಸಿತು.

ಕರ್ನಾಟಕೇತರ ರಾಜ್ಯಗಳಿಂದ ಬಂದಂತಹ ವಿದ್ಯಾರ್ಥಿಗಳು ಶ್ರೀಗಂಧದ ನಾಡಲ್ಲಿ ಅವರ ಅನುಭವಗಳನ್ನು ಹಂಚಿಕೊಂಡರು. ಕರಾವಳಿಯ ಹೆಮ್ಮೆಯ ಗಂಡು ಕಲೆ ಯಕ್ಷಗಾನವನ್ನು ಚಾಣಕ್ಯದ ಬಾಲೆಯರು ಅದ್ಭುತವಾಗಿ ಪ್ರದರ್ಶಿಸಿದರು.ಕೊನೆಗೆ ಎಲ್ಲರ ಮೈನವಿರೇಳಿಸುವ ವೀರಗಾಸೆಯ ಪ್ರದರ್ಶನ, ವಿದ್ಯಾರ್ಥಿಗಳ ಉತ್ಸಾಹ ಮುಗಿಲು ಮುಟ್ಟಿತ್ತು. ಕನ್ನಡದ ಧ್ವಜ ಸಂಜೆಯ ತಂಗಾಳಿಯೊಂದಿಗೆ ಪೈಪೋಟಿ ನಡೆಸುತ್ತಿತ್ತು. ಧ್ವಜದ ಕೆಂಬಣ್ಣ ಅಸ್ತವಾಗುತ್ತಿರುವ ಸೂರ್ಯನೊಂದಿಗೆ ಬೆರೆತು ಹೋದಂತ್ತಿತ್ತು. ಆ ಸಂಜೆ ಕನ್ನಡಿಗರ ನೆತ್ತರಲ್ಲಿ ಕನ್ನಡ ಮಿಳಿತವಾಗಿತ್ತು. ವಿಶ್ವವಿದ್ಯಾಲಯ ಕನ್ನಡಮಯವಾಗಿತ್ತು. ರಾಜ್ಯೋತ್ಸವದ ಸಂಭ್ರಮಾಚರಣೆಯ ಹಿಂದೆ ಇದ್ದ ಸಂಘಟಕರ ಶ್ರಮ ಸಾರ್ಥಕವಾಗಿತ್ತು. ಎಲ್ಲರ ಮುಖದಲ್ಲಿ ಅರಳಿದ್ದ ಮಂದಹಾಸ ಮತ್ತು ಉತ್ಸಾಹದೊಂದಿಗೆ ಕನ್ನಡ ರಾಜ್ಯೋತ್ಸವದ ಆಚರಣೆ ಮಂಗಳವಾಯಿತು.














**- ಛಾಯಾಚಿತ್ರ: ಪ್ರಭವ್ ದೇಶಪಾಂಡೆ,**
ತೃತೀಯ ಬಿಸಿಎ.

# ಉತ್ತಮ ಬದುಕಿಗೆ ದೂರದೃಷ್ಟಿಯ ಅಗತ್ಯ

ಸರಿದಾರಿಯ ತುಳಿಯುತ ನೋಡ
ಉತ್ತಮ ಬದುಕ ಕಟ್ಟುತ ಬಾರ
ದೂರದೃಷ್ಟಿಯ ಬಿತ್ತುತ ನೋಡ
ಬದುಕೆಂಬುವುದು ಬಂಗಾರ ಹಾರ....

ಹೌದು ನಮ್ಮ ಬದುಕು ಉತ್ತಮ, ಉತ್ಕೃಷ್ಟವಾಗಿರಬೇಕಾದರೆ ನಾವು ಮಾಡುವ ಚಿಂತನೆಗಳು, ಮಂಥನಗಳು, ಆಲೋಚನೆಗಳೆಲ್ಲವು ಉತ್ಕರ್ಷವಾಗಿಯೇ ಇರಬೇಕು.ಉತ್ಕಟವಾದ ನಿಲುವುಗಳು ,ನಮ್ಮ ನಡೆನುಡಿಗಳು, ನಾವು ಸಾಗುವ ಸತ್ಪಥಗಳು, ನಾವು ಕೈಗೊಳ್ಳುವ ಕಾರ್ಯಗಳೆಲ್ಲವೂ ಉತ್ಕಂಠಿತವಾಗಿದ್ದರೆ ನಮ್ಮ ಬದುಕು ಸದಾ ಹಸಿರಾಗಿದ್ದು ಬಂಗಾರದಂತೆಯೆ ಲಕಲಕಿಸುತ್ತದೆ.ಮನುಷ್ಯನಾಗಿ ಹುಟ್ಟಿದ ಮೇಲೆ ಏನಾದರೊಂದು ಸಾಧಿಸಿ ಹೋಗಬೇಕು. ಕೈಲಾಗದವರಿಗೆ, ನಿರ್ಗತಿಕರಿಗೆ ಬಡವರಿಗೆ ತನ್ನ ಕೈಲಾದುದ್ದಷ್ಟನ್ನೂ ಮಾಡದಿದ್ದರೆ ಯಾವ ದೇವನಾದರೂ ತಥಾಸ್ತು ಎಂದು ಹೇಳಲಾರನು.



ಜೀವಜಗತ್ತಿನೊಳಗೆ ಮನುಷ್ಯ ಪ್ರಾಣಿ ಬಿಟ್ಟು ಉಳಿದ ಪ್ರಾಣಿಗಳಾವುವು ಜೀವಿಸಿರುತ್ತವೆಯೇ ಹೊರತು , ಬದುಕುವುದಿಲ್ಲ . ನಿಜವಾದ ಬದುಕುವ ಕಲೆ ಗೊತ್ತಿರುವುದು ಮನುಷ್ಯನಿಗೆ ಮಾತ್ರ.ಹಾಗಾಗಿ ಮನುಷ್ಯನಾಗಿ ಹುಟ್ಟಿದ ಮೇಲೆ ಉತ್ತಮ ರೀತಿಯ ಬದುಕುವ ಕಲೆ ಬೆಳೆಸಿಕೊಳ್ಳಬೇಕು.

ಜನನ ಮರಣಗಳೆರಡೂ ನಮ್ಮ ಕೈಯಲ್ಲಿಲ್ಲ,ನಮ್ಮ ಬದುಕನ್ನೂ ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ.ಆದ್ದರಿಂದ ನಮ್ಮ ಕೆಲಸಗಳು ನಮ್ಮ ಆದರ್ಶದ ನುಡಿಗಳು ನಾವು ಅಳಿದ ಮೇಲೂ ಜನಮಾನಸದೊಳಗೆ ಶಾಶ್ವತವಾಗಿ ಉಳಿಯುವಂತೆ ಮಾಡಿಕೊಂಡು ಜೀವಿಸುವುದಿದೆಯಲ್ಲ ಅದೇ ಉತ್ತಮ ಬದುಕು.ಹಾಗೆಯೇ ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ವಿಶಿಷ್ಟವಾದ ಜ್ಞಾನಸಂಪತ್ತು ಇದ್ದೇ ಇರುತ್ತದೆ. ಅದನ್ನು ಸದ್ವಿನಿಯೋಗ ಮಾಡಿಕೊಳ್ಳುತ್ತ ಜೀವಿಸುವುದೆ ಉತ್ತಮ ನಡೆ,ಉತ್ತಮ ಬದುಕು.

ಇಂತಹ ಉತ್ತಮ ಬದುಕನ್ನು ನಾವು ನೀವೆಲ್ಲ ಪಡೆಯಬೇಕಾದರೆ ನಮ್ಮೊಳಗೆ ಒಂದು ದೂರದೃಷ್ಟಿಯಿರಬೇಕು. ದೂರದೃಷ್ಟಿಯೊಂದಿಗೆ ಸಾಗದಿದ್ದರೆ ನಮ್ಮ ಬದುಕಿನ ಬಂಡಿ ಬೀಳುವುದಂತು ದಿಟ.ಹಾಗಾದ್ರೆ ದೂರದೃಷ್ಟಿ ಎಂದರೇನು? ಎಂಬುದನ್ನು ಮೊದಲಿಗೆ ತಿಳಿದು ಕೊಳ್ಳೋಣ. "ಕ್ಷಿಪ್ರ ಬದಲಾವಣೆಗಳು ಮತ್ತು ಅನಿಶ್ಚಿತತೆಗಳು ಹೇರಳವಾಗಿರುವ ಜಗತ್ತಿನಲ್ಲಿ, ದೂರದೃಷ್ಟಿಯ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದಂತು ಒಂದು ಸಾಹಸವೇ ಸರಿ! " ನಮ್ಮ ಜೀವನ ಮತ್ತು ವ್ಯವಹಾರ ಎರಡರ ಸಂಕೀರ್ಣತೆಗಳನ್ನು ಯಶಸ್ವಿಯಾಗಿ ನ್ಯಾವಿಗೇಟ್ ಮಾಡಲು ಈ ದೂರದೃಷ್ಟಿಯನ್ನು ಒಂದು ಕೀಲಿಯಾಗಿ ಬಳಸಿಕೊಳ್ಳುವರು. ಮನುಷ್ಯ ತನ್ನ ಜೀವನದಲ್ಲಿನ ಉದಯೋನ್ಮುಖ ಪ್ರವೃತ್ತಿಗಳು ಮತ್ತು ತಂತ್ರಜ್ಞಾನಗಳು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಭೂದೃಶ್ಯದ ಬಗ್ಗೆ ಚೆನ್ನಾಗಿ ತಿಳಿದಿರುವುದು.ನಿರಂತರ ಮತ್ತು ಅಂತರ್ಗತವಾಗಿ ಯಾವುದೇ ಆಲೋಚನೆಗಳನ್ನು ನಮ್ಮೊಳಗಿನ ದೂರದೃಷ್ಟಿಯಿಂದಲೇ ಮಾಡಬೇಕಾಗುವುದು.

ನಮ್ಮ ಬದುಕು ಉತ್ತಮವಾಗಿರಬೇಕಾದರೆ ದೂರದೃಷ್ಟಿಯ ಪಾತ್ರವು ಬಹಳ ಮುಖ್ಯವಾಗಿರುತ್ತದೆ. ನಮ್ಮ ವೃತ್ತಿಜೀವನದ ಬಗ್ಗೆ ಚಿಂತನೆಯ ಚರ್ಚೆಯಲ್ಲಿ ಪರಸ್ಪರ ತೊಡಗಿಸಿಕೊಳ್ಳುತ್ತಾ ಮಹತ್ವಾಕಾಂಕ್ಷೆಯ ಗುರಿಗಳನ್ನು ಸ್ಥಾಪಿಸಲು ಮತ್ತು ಅಗತ್ಯ ಕೌಶಲ್ಯಗಳನ್ನು ಪಡೆದುಕೊಳ್ಳಲು ಈ ದೂರದೃಷ್ಟಿಯು ಅನುಕೂಲವಾಗಿದೆ.

ಆರೋಗ್ಯ ಹಾಗೂ ಸ್ವಾಸ್ಥ್ಯ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ, ಅರಿವಿನ ಪಕ್ಷಪಾತವನ್ನು ನಿವಾರಿಸುವ ಹಾದಿಯಲ್ಲಿ,ಆಶಾವಾದ ಮತ್ತು ಅತಿಯಾದ ಆತ್ಮವಿಶ್ವಾಸ ಬೆಳೆಸುವಲ್ಲಿ,ವ್ಯತಿರಿಕ್ತ ಸಾಕ್ಷಿಗಳನ್ನು ಹುಡುಕುವುದರಲ್ಲಿ ಮತ್ತು ಜಾಗತಿಕ ಸವಾಲುಗಳು ಮತ್ತು ಸಹಕಾರದೊಂದಿಗೆ ಮುನ್ನುಗ್ಗಲು ವ್ಯಕ್ತಿಗೆ ದೂರದೃಷ್ಟಿಯು ಸಹಾಯಕವಾಗಿದೆ.

ನಮ್ಮೊಳಗೆ ದೂರದೃಷ್ಟಿಯ ಚಿಂತನೆಗಳಿದ್ದರಷ್ಟೆ ನಮ್ಮ ಬದುಕು ಉತ್ಕೃಷ್ಟ ಮಟ್ಟದಲ್ಲಿ ಸಾಗುತ್ತದೆ.ಹಾಗೂ ಪ್ರತಿಯೊಂದು ಕ್ಷೇತ್ರಗಳಲ್ಲೂ ಕೂಡ ಮುನ್ನಡೆ ಸಾಧಿಸಲು ಇದರ ಪಾತ್ರ ಅನನ್ಯವಾಗಿದೆ.

ಉತ್ತಮ ಸಮಾಜದೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳಲು ದೂರದೃಷ್ಟಿಯು ಕಾರಣವೆಂದರೆ ತಪ್ಪಾಗಲಾರದು. ಪ್ರತಿಯೊಬ್ಬ ವ್ಯಕ್ತಿ ಸಕಾರಾತ್ಮಕವಾಗಿ ವಿಚಾರ ಮಾಡಿದಾಗ ಮಾತ್ರ ತಮ್ಮ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯ.ನಾವು ಮತ್ತೊಬ್ಬರ ಬದುಕಿನ ಅಭಿವೃದ್ಧಿಗೆ ಕಾರಣವಾದರೆ ಅದು ನಿಜವಾದ ಅಭಿವೃದ್ಧಿ. ನಂಬಿಕೆ, ಶ್ರದ್ಧೆ ಮೂಲಕ ಸದುದ್ದೇಶದ ಕೆಲಸಗಳನ್ನು ಸಾಧಿಸಬಹುದು. ನಮ್ಮ ದುಡಿಮೆಯ ಒಂದು ಪಾಲನ್ನು ಹಸಿದವರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ ನೀಡುವ ಹವ್ಯಾಸವನ್ನು ಬಳಸಿಕೊಳ್ಳಬೇಕು.ನಮ್ಮ ಆಲೋಚನೆಗಳು ಸಕಾರಾತ್ಮಕವಾಗಿದ್ದಾಗ ಒಳಿತೆ ಆಗುವುದು.ಸದ್ಭಾವ, ಸನ್ಮಾರ್ಗ, ಸದ್ಗುಣಗಳನ್ನು ರೂಢಿಸಿಕೊಂಡು ಉತ್ತಮ ಕಾರ್ಯಗಳನ್ನು ಮಾಡುತ್ತ ಸಹಾಯ ಸಹಕಾರ ಗುಣಗಳನ್ನು ಬೆಳೆಸಿಕೊಂಡು ನಮ್ಮ ಕೈಲಾದ ಮಟ್ಟಿಗೆ ನೆರವನ್ನು ನೀಡುತ್ತ ಉತ್ತಮವಾದ ಬದುಕನ್ನು ಕಟ್ಟಿಕೊಳ್ಳಬಹುದು.ಹಾಗೆಯೆ ನಾವು ಸರಿಯಾದ ಮಾರ್ಗದಲ್ಲಿ ಸಾಗಿ ಉತ್ತಮ ಹಣ ಸಂಪಾದನೆಯನ್ನು ಮಾಡಿದಾಗ ನಮಗೂ ನಮ್ಮ ಹೆತ್ತವರಿಗೂ ಗೌರವ ಸಿಗುವುದು ಹಾಗೂ ನಮ್ಮ ಜೀವನ ಬಂಡಿ ಎಂತಹದ್ದೆ ಅಡೆತಡೆಗಳು ಬಂದರೂ ಜಗ್ಗದೆ ,ಕುಗ್ಗದೆ ,ಸಾಗುವ ಪ್ರವೃತ್ತಿಯನ್ನು ಈ ದೂರದೃಷ್ಟಿಯು ಬೆಳೆಸುತ್ತದೆ.

**- ಧನಶ್ರೀ ಗೋರೆ**
ಪರೀಕ್ಷಾ ಪರಿಶೀಲನಾ ವಿಭಾಗದ ಸಿಬ್ಬಂದಿ

---

## ಅವಳಲ್ಲೇನಿತ್ತು ಅಂಥ ವಿಶೇಷ?

ಅವಳು ಪ್ರಭಾವದಲ್ಲಿ ಹಿಮಾಲಯ,
ಎದಿರು ನಿಂತವರನ್ನ ಸ್ತಬ್ಧವಾಗಿಸುತ್ತಿದ್ದಳು.
ಸ್ವಭಾವದಲ್ಲಿ ಗೌರಿಶಂಕರ ಶಿಖರ,
ನಡೆನುಡಿಯೆಲ್ಲ ಹೇಮಮಯ.
ನೋಡಿದವರೆಲ್ಲ ಥೇ ಈ ದೇವರು ಈ
ಕಣ್ಣರೆಪ್ಪೆಗಳನ್ನೇಕೆ ಅಡ್ಡವಿಟ್ಟ ಎನ್ನುವಂತಹ ರೂಪ.

ಮತ್ತೆ ಅವರ್ಯಾಕೆ ಒಂದಾಗಲಿಲ್ಲ,
ಅವನು ಬಿಸಿಲೂರಿನ ಬೋಳು ಬೆಟ್ಟ,
ಹತ್ತಿರ ಹೋದವರ ದಗ್ಧಗೊಳಿಸುತ್ತಿದ್ದ.

ಸ್ವಭಾವದಲ್ಲಿ ಶಾಖವನ್ನೆ ಸೂಸುವ ಬಂಡೆ,
ನಡೆನುಡಿಯೆಲ್ಲ ಧೂಳುಮುಸುಕಿದಂತ ಅಸ್ಪಷ್ಟತೆ.
ನೋಡಿದವರೆಲ್ಲ ಅಬ್ಬಾ ದೇವರು ಕಣ್ಣುಗಳಿಗೆ
ರೆಪ್ಪೆ ಇಟ್ಟು ಒಳ್ಳೆಯದು ಮಾಡಿದ ಎನ್ನುವಂತಹ
ರೂಪ.

ಮುಂದೇನಾಯಿತು?
ಅವನು ಅಮರ ಪ್ರೇಮಕಥೆ ಬರೆಯಹೋದ,
ವಿಧಿಯದನ್ನ ಅಪೂರ್ಣ ಕಥೆಯಾಗಿಸಿತು,
ಆದರೂ ಅದೊಂದು ಅಪೂರ್ವ ಕಥೆಯಾಯಿತು.

**- ಹೆದ್ದಾರಿ ರವಿಕುಮಾರ್,** ಸಂಸ್ಕೃತ ಉಪನ್ಯಾಸಕರು

# ಕರ್ನಾಟಕದಲ್ಲಿ ಕನ್ನಡ!

ಬೆಂಗಳೂರಿಗೆ ಬಂದ ಇತರೆ ಭಾಷಿಕರು ಕನ್ನಡ ಏಕೆ ಕಲಿಯುವುದಿಲ್ಲ? ದಶಕಗಳು ಕಳೆದರೂ 'ಕನ್ನಡ್ ಗೊತ್ತಿಲ್ಲ' ಎಂಬ ಧೋರಣೆಯ, ಅಲಕ್ಷ್ಯದ ಮಾತುಗಳನ್ನೇ ನಾವೇಕೆ ಕೇಳಿಸಿಕೊಳ್ಳುತ್ತಾ ಬಂದ್ದಿದ್ದೇವೆ? ನಿಜಕ್ಕೂ ಇದಕ್ಕೇನು ಕಾರಣ? ಯಾರು ಕಾರಣ? ಭಾರತದ ಇತರೆ ರಾಜ್ಯಗಳಿಗೆ ಹೋದಾಗ ಅಲ್ಲಿನ ಭಾಷೆ ಕಲಿತು ಮಾತಾಡುವ ಅದೇ ಮಂದಿ ಕರ್ನಾಟಕಕ್ಕೆ ಬಂದಾಗ ಮಾತ್ರ ಇಲ್ಲಿನ ನೆಲದ ಭಾಷೆಯನ್ನು ಕಲಿಯದಿರುವ ತೀರ್ಮಾನಕ್ಕೆ ಬರುವುದೇಕೆ? ನನ್ನ ಭಾಷೆಯನ್ನು ಕಲಿಯುವುದು ಅಷ್ಟೊಂದು ಕಷ್ಟಸಾಧ್ಯವೇ? ಕನ್ನಡ ಕಬ್ಬಿಣದ ಕಡಲೆಯೇ? ಇಂಥ ಹತ್ತು ಹಲವು ಪ್ರಶ್ನೆಗಳನ್ನು ದಶಕಗಳಿಂದ ನನಗೇ ನಾನೇ ಕೇಳಿಕೊಳ್ಳುತ್ತಾ ಬಂದಿದ್ದೇನೆ. ಈ ನಿಟ್ಟಿನಲ್ಲಿ ಮೂಡಿದ ಯಕ್ಷ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನವನ್ನೂ, ಸಂಶೋಧನೆಯನ್ನೂ ಮಾಡುತ್ತಾ ಬಂದಿದ್ದೇನೆ. ಹಾಗಾಗಿ ನನ್ನ ಹುಡುಕಾಟಕ್ಕೆ ನಿಲುಕಿದ್ದರಲ್ಲಿ ಕೆಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತಿದ್ದೇನೆ.

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮುಕ್ತಿಯ
ಗಳಿಸಿಕೊಂಡರೆ ಸಾಲದೆ?

ಎನ್ನುವ ಮಹಲಿಂಗರಂಗನ 'ಅನುಭಾವಾಮೃತ'ದ ಕಾವ್ಯದ ತುಣುಕಿಗಿಂತ ಕನ್ನಡದ ಮಹತ್ತನ್ನು ಸಾರಲು ಇನ್ನೇನು ಬೇಕು? ಇಂಥ ಸುಮಧುರ ಕನ್ನಡ ಭಾಷೆಯನ್ನು ಮಾತೃಭಾಷೆಯನ್ನಾಗಿ; ರಾಜ್ಯಭಾಷೆಯನ್ನಾಗಿ ಹೊಂದಿರುವ ನಾವು ಹೆಮ್ಮೆಯಿಂದ ತಲೆಯೆತ್ತಿ, ಎದೆತಟ್ಟಿ ಕನ್ನಡದಲ್ಲಿ ವ್ಯವಹರಿಸದೆ ಬಾಡಿಗೆ ಭಾಷೆಯ ವ್ಯಾಮೋಹಕ್ಕೆ ಒಳಗಾಗಿರುವುದೇಕೆ? ಸಹಸ್ರಾರು ವರ್ಷಗಳ ಇತಿಹಾಸವಿರುವ; ಆಡಿದ್ದನ್ನೇ ಬರೆಯುವ, ಬರೆದದ್ದನ್ನೇ ಆಡುವಷ್ಟು ವೈಜ್ಞಾನಿಕವಾಗಿರುವ ಈ ಸುಂದರ ಭಾಷೆಯ ಬಗ್ಗೆ ನಮಗಿಷ್ಟು ತಾತ್ಸಾರವೇಕೆ? ಒಮ್ಮೆ ವಿಶ್ವೇಶ್ವರ ಭಟ್ಟರು ಲೇಖನವೊಂದರಲ್ಲಿ 'ಬೆಂಗಳೂರಲ್ಲಿ ಯಾರೋ ಇಬ್ಬರು ನಿಂತು ಇಂಗ್ಲೀಷಲ್ಲಿ ವ್ಯವಹರಿಸುತ್ತಿದ್ದಾರೆ ಎಂದರೆ ಅವರು ಖಂಡಿತ ಕನ್ನಡಿಗರೇ ಆಗಿರುತ್ತಾರೆ' ಎಂಬ ಅರ್ಥಬರುವಂತೆ ಬರೆದದ್ದು ನೆನಪಾಗುತ್ತಿದೆ.

ಅಂದರೆ ನಮ್ಮ ಕನ್ನಡಿಗರಿಗೆ ಕನ್ನಡ ಮಾತಾಡುವುದು ಅವಮಾನವೇ? ಕೀಳರಿಮೆಯೇ?! ಇಂಗ್ಲೀಷಲ್ಲಿ ಸ್ವಚ್ಛವಾಗಿ, ನಿರರ್ಗಳವಾಗಿ, ಸ್ವತಃ ಇಂಗ್ಲೀಷರೇ ನಾಚುವಷ್ಟು ಸ್ಫುಟವಾಗಿ ಮಾತಾಡುವ ಇವರ ಮಾತಿನ ನಡುವಲ್ಲಿ ಆಗಾಗ ಬಡಪಾಯಿ ಕನ್ನಡ ನುಸುಳಿ ಬಂದರೆ ಅದು ಕನ್ನಡ ತಾಯಿಯ ಪುಣ್ಯವಷ್ಟೇ! ಎನ್ನುವಷ್ಟು ಕನ್ನಡ ಹಿನ್ನೆಲೆಗೆ ಸರಿದು ಹೋಗುವುದರ ಹಿಂದಿನ ಕಾರಣವೇನು? ಇದರ ಬಗ್ಗೆ ಹೇಳಲು ಹೋದರೆ ಪದಮಿತಿ, ಪುಟಮಿತಿ ಎಲ್ಲವೂ ಮೀರಿಹೋಗುವ ಭಯವಿದೆ. ಹಾಗಾಗಿ ಅದನ್ನುಳಿದ ಮುಖ್ಯ ವಿಷಯದ ಕುರಿತಂತೆ ಮಾತ್ರ ಇಲ್ಲಿ ಗಮನಹರಿಸುತ್ತೇನೆ. ಕನ್ನಡಿಗರೇ ಕನ್ನಡ ಮಾತಾಡಲು ಇಷ್ಟು ಹಿಂಜರಿಯುತ್ತಿರುವಾಗ ಇತರ ಭಾಷಿಕರು ಇಲ್ಲಿಗೆ ಬಂದು ಕನ್ನಡ ಕಲಿಯುವುದಾದರೂ ಹೇಗೆ? ಕಲಿತು ನಮ್ಮೊಡನೆ ಕನ್ನಡದಲ್ಲಿ ಆಡುವುದಾದರೂ ಹೇಗೆ? ಪಾಪ! ಅವರು ಇಲ್ಲಿಗೆ ಬಂದ ಹೊಸದರಲ್ಲಿ ಭಯದಲ್ಲಾದರೂ ಕನ್ನಡ ಕಲಿಯುವ ಪ್ರಯತ್ನವನ್ನು ಸ್ವಲ್ಪವಾದರೂ ಮಾಡಿಯೇ ಇರುತ್ತಾರೆ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಆದರೆ ನಮ್ಮ ಕೆಚ್ಚೆದೆಯ ಕನ್ನಡಿಗರು ಅವರು ಯತ್ನಿಸಲು ಹೋದರೂ, ಅದಕ್ಕೆ ಆಸ್ಪದವೇ ಕೊಡದಂತೆ 'ವಿಚೀಸ್ ಯುವರ್ ಮದರ್ ಟಂಗ್?' ಎಂದು ಕೇಳಿ, ಅವರದೇ ಭಾಷೆಯಲ್ಲಿ ಸರಾಗವಾಗಿ ಉತ್ತರಿಸುವ ಉದಾರತೆ ಮೆರೆಯುತ್ತಾರೆ ಅಥವಾ ಅದು ಅರಿಯದ ದೂರದ ಭಾಷೆಯಾಗಿದ್ದರೆ ಇಂಗ್ಲೀಷ್ ಇದ್ದೇ ಇದೆಯಲ್ಲ!? ಅದರಲ್ಲಿ ಸಂವಹನ ಮಾಡಿ ಕೃತಾರ್ಥರಾಗುತ್ತಾರೆ. ಮತ್ತೇಕೆ ಕನ್ನಡ!? ಗಂಟೆಗಟ್ಟಲೆಬೇಕಾದರೂ ಪರಭಾಷಿಕನ ಪ್ರಶ್ನೆಗಳಿಗೆ ಆಂಗ್ಲದಲ್ಲೇ ಹರಟಿ ತಣಿಸುವ ಕನ್ನಡಿಗನ ಮಹಾಭಿಮಾನಕ್ಕೆ ಏನು ಹೇಳಲು ಸಾಧ್ಯ!? ಇನ್ನೊಂದು ವಿಚಾರ ನೆನಪಿರಲಿ ಆ ನಡುವೆ ಅಪ್ಪಿತಪ್ಪಿಯೂ ಕನ್ನಡ ನುಸುಳದಂತೆ ಜಾಗ್ರತೆವಹಿಸುವುದನ್ನು ಆ ವ್ಯಕ್ತಿ ಮರೆಯುವುದಿಲ್ಲ.

ಆದರೆ ಅನಿವಾರ್ಯವಾಗಿ ಕನ್ನಡ ಮಾತಾಡಬೇಕಾದ ಪ್ರಸಂಗ ಬಂದಾಗ ಮಾತ್ರ ಆ ಕನ್ನಡದ ಸಂಭಾಷಣೆಯಲ್ಲಿ ಶೇಕಡ ಅರವತ್ತಕ್ಕಿಂತ ಹೆಚ್ಚು ಭಾಗ ಇಂಗ್ಲೀಷೇ ಆವರಿಸಿಕೊಂಡಿರುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಗುಟ್ಟು! ವಾಸ್ತವ ಹೀಗಿರುವಾಗ ಪರಭಾಷಿಕರು ಕನ್ನಡ ಕಲಿವುದಾದರೂ ಹೇಗೆ? ಅಕಸ್ಮಾತ್! ಆರಂಭದಲ್ಲಿ ಪ್ರಯತ್ನಿಸಿದ್ದರೂ; ಹೇಗೂ ಕನ್ನಡ ಕಲಿಯದೇ ಜೀವನ ಸುಗಮವಾಗಿ ಸಾಗುತ್ತಿರುವಾಗ 'ಕನ್ನಡದಗೊಡವೆ ಏಕೆ ಬಿಡು' ಎನಿಸಿ ತಮ್ಮ ಪ್ರಯತ್ನಕ್ಕೇ ಪೂರ್ಣವಿರಾಮ ಇಟ್ಟರೆ ಅದರಲ್ಲಿ ಆಶ್ಚರ್ಯವೇನು? ಈ ಧೋರಣೆಯ ಪರಿಣಾಮವೇ ಕನ್ನಡ ನಾಡಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣಿಸುತ್ತಿರುವುದು. ಕರ್ನಾಟಕದಲ್ಲಿ ಕನ್ನಡಿಗರು ಶೇಕಡ 60ಕ್ಕಿಂತ ಕನಿಷ್ಠಕ್ಕೆ ಇಳಿದಿದ್ದಾರೆ ಎಂಬ ಅಂಕಿ-ಅಂಶಗಳನ್ನು ಓದುವಂತೆಯೂ; ಕೇಳುವಂತೆಯೂ ಆಗಿರುವುದು. ಹಾಗಾದರೆ ಇದಕ್ಕೆ ಪರಿಹಾರವೇ ಇಲ್ಲವೇ? ಏಕಿಲ್ಲ!? ಖಂಡಿತ ಇದೆ! ಮೊದಲಿಗೆ ನಾವು ನಮ್ಮ ತಾಯಿ ಭಾಷೆಯನ್ನು ಪ್ರೀತಿಸಬೇಕು, ಪ್ರೀತಿಸಿ ಕಲಿಯಬೇಕು, ಕಲಿತು ಆಡಬೇಕು, ಆಡುತ್ತಾ ನಲಿಯುತ್ತಾ, ಹೆಮ್ಮೆಯಿಂದ ಇತರರಿಗೂ ಕಲಿಸಬೇಕು! ಆಗ ನಮ್ಮ ಕನ್ನಡ, ಜಗತ್ತಿನ ಮಧುರ ಹಾಡಾಗುವುದರಲ್ಲಿ ಸಂಶಯವೇ ಇಲ್ಲ. ಕಡೇ ಮಾತು!

ಪರಭಾಷಿಕರೆಲ್ಲರೊಂದಿಗೂ ನಾವು ಕನ್ನಡದಲ್ಲೇ ವ್ಯವಹರಿಸುವುದಕ್ಕೆ ಪ್ರಯತ್ನಿಸಬೇಕಿದೆ. ಇಲ್ಲಿನ ಎಲ್ಲಾ ಕನ್ನಡಿಗರೂ ಇತರ ಭಾಷಿಕರೊಂದಿಗೆ ಕನ್ನಡದಲ್ಲೇ ಸಂವಹನ ಮಾಡಲಾರಂಭಿಸಿದರೆ ಅವರಿಗೂ ಕರ್ನಾಟಕದಲ್ಲಿ ಬದುಕಲು ಕನ್ನಡ ಕಲಿಯಲೇಬೇಕೆಂಬ ಭಾವನೆ ಮೂಡುತ್ತದೆ. ಅನಿವಾರ್ಯಕ್ಕಾದರೂ ಕನ್ನಡ ಮಾತಾಡುವಂತಾಗುತ್ತದೆ. ಆಗ ಕಸ್ತೂರಿ ಕನ್ನಡ ಮುಂದಿನ ಸಹಸ್ರ ಸಹಸ್ರ ವರ್ಷಗಳಿಗೆ ನಿರಾತಂಕವಾಗಿ ಪರಿಮಳ ಸೂಸುತ್ತಾ ಸಾಗುತ್ತದೆ. ಈ ಕಾಯಕಕ್ಕೆ ನಾವೆಲ್ಲರೂ ಬದ್ಧರಾದರೆ ಕನ್ನಡದ ಕಂಪು ಸರ್ವವ್ಯಾಪಿಯಾಗುವುದರಲ್ಲಿ ಅನುಮಾನವೇ ಇಲ್ಲ!

**- ಕೇಶವಚಂದ್ರ**
ಕನ್ನಡ ಉಪನ್ಯಾಸಕರು

---

# ಗಣರಾಜ್ಯ

ಜನಗಣ ಈ ಜನಮನ
ಗಣರಾಜ್ಯಕೆ ಇಂದು ಶುಭದಿನ
ದೇಶವೆಲ್ಲ ಹಬ್ಬಹೂರಣ
ಶಾಲೆಗಳಲ್ಲಿ ತಳಿರು ತೋರಣ

ಮಕ್ಕಳಲಿ ಹೊಸಹುರುಪಿನ
ಸಂತಸಕ್ಕೆ ಥಕತೈ ನರ್ತನ
ಕುಣಿಯುವಲ್ಲಿ ಮನರೋಮಾಂಚನ
ಆದಕಂಡು ಬೆರೆವಾಕರ್ಷಣ

ಭಾರತಾಂಬೆಯ ಮಡಿಲಲ್ಲಿ
ಬಣ್ಣ ಬಣ್ಣದ ರಂಗೋಲಿ
ಆ ಎತ್ತರದ ಬಾನಲ್ಲಿ
ಹಾರೋ ಹಕ್ಕಿಯ ನೋಡಲ್ಲಿ

ಬ್ಯಾಂಡ್ ತುತ್ತುರಿಯ ಸದ್ದಲ್ಲಿ
ಮೊಳಗಿದೆ ಸಂಗೀತ ಕೇಳಿಲ್ಲಿ
ನಮ್ಮೆಲರ ಮುಖದಲ್ಲಿ
ಉತ್ಸಾಹದ ನಗುಚೆಲ್ಲಿ

ಹಾರಿಸಿ ನಮ್ಮ ಬಾವುಟವ
ಜಗಕೆಲ್ಲ ಸಾರಿ ಹೇಳುವ
ಗಣವಾಗಿದೆ ನಮ್ಮ ರಾಷ್ಟ್ರ
ಭಾರತೀಯರೆ ನಾವು ಶ್ರೇಷ್ಠ

ಪುಣ್ಯ ಪುರುಷರು ಹುಟ್ಟಿದ ಈ ನಾಡು
ಸತ್ಯ ಧರ್ಮದ ನೆಲೆಬೀಡು
ಭರತ ಜನಿಸಿದ ಈ ಭೂಮಿ
ಆಗು ನೀ ನಮ್ಮ ದೇಶ ಪ್ರೇಮಿ

**ರಾಚಯ್ಯ.ಪಿ,** ಸಿಬ್ಬಂದಿ

# ಪದಗಳಂಗಳ - ೦೨

| | | | | | | | | |
|---|---|---|---|---|---|---|---|---|
| ■ | 1. | | 2. | ■ | 3. | | 4. | ■ |
| 5. | | ■ | | ■ | | ■ | 6. | 7. |
| | ■ | ■ | 8. | | | ■ | ■ | |
| 9. | | 10. | | ■ | 11. | 12. | | |
| ■ | ■ | | ■ | ■ | ■ | | ■ | ■ |
| 13. | | | 14. | ■ | 15. | | | 16. |
| | ■ | ■ | 17. | | | ■ | ■ | |
| 18. | 19. | ■ | | ■ | | ■ | 20. | |
| ■ | 21. | | | ■ | 22. | | | ■ |

**ಎಡದಿಂದ ಬಲಕ್ಕೆ:**
1. ಹಡಗುಗಳನ್ನು ನಿಲ್ಲಿಸುವಲ್ಲಿ, ಜನರು ಧಾವಿಸಿದರು (3)
3. ವಿಷ್ಣುವಿನ ವಾಹನ (3)
5. ಯೋಧರ ಸೇನೆ (2)
6. ಕಾವ್ಯದ ಕನ್ನಡದ ಹೆಸರು ತಿರುಗಿದೆ (2)
8. ಧಾರಾವಾಹಿ ಇದರಲ್ಲಿ ಪ್ರಸಾರವಾಗಿದ್ದು ಅಥವಾ ತನ್ಮೂಲಕ ಸಾಗಿಸುವಂತದ್ದು (3)
9. ಕರ್ಣಕ್ಕೆ ಕಚಗುಳಿಯಾಗುವಂತೆ ಪಿಸುಗುಟ್ಟುತ್ತಾ ಹೇಳಿದ್ದು (4)
11. ಸಂತಸವನ್ನು ಇದರ ಮೂಲಕ ಇನ್ನು ಸವಿಯುವರು (4)
13. ಭಗವಂತನ ದರ್ಶನಕ್ಕೆ ಹೋಗಿದ್ದು ಇಲ್ಲಿಗೆ (4)
15. ತಿಳಿಯದೆ ನಡೆದುಹೋದ ಅನಿರೀಕ್ಷಿತ ಘಟನೆ (4)
17. ನೂರನ್ನು ಹೀಗೆನ್ನಿ (3)
18. ವಿಕಿರಣದ ಶಬ್ದವನ್ನೂ ಆಲಿಸಿದ್ದು! (2)
20. ಸಮಾನತೆಯ ಮಂತ್ರ ಬೋಧಿಸಿದ ತಾಯಿ (2)
21. ಧರ್ಮಕ್ಕಾಗಿ ರಕ್ತ ಹರಿಸಿದ ನರರ ರಕ್ತನಾಳ (3)
22. ಕಣಿ ಹೇಳುವ ಸ್ಥಳದ ಬದಿ ಇರುವ ಕೊಳ (3)

**ಮೇಲಿಂದ ಕೆಳಕ್ಕೆ**
1. ಓ ದೊಡ್ಡದಾದ ಕಲ್ಲನ್ನು ಕಂಡೆ ಎಂದು ಈ ರೀತಿಯಾಗಿ ಉದ್ಗರಿಸಿದ (2)
2. ಆಧಾರ - ಪುರಾವೆ, ಅಷ್ಟೇ ಅಲ್ಲದೆ ಯು ಆರ್ ಅನಂತಮೂರ್ತಿಯವರ ಕನ್ನಡ ತ್ರೈಮಾಸಿಕ ಪತ್ರಿಕೆಯ ಹೆಸರು ಇದಾಗಿತ್ತು (2)
3. ಗಸಿಯನ್ನು ಮನಸಿಟ್ಟು ನೋಡಿ (4)
4. ಮುಚ್ಚಳ ಹೊಂದಿದ ಪಾತ್ರೆ (2)
5. ಪುಟ್ಟನು ಟಪ್ ಟಪ್ ಎಂದು ಸಿಡಿಸಿದ ಸಿಡಿಮದ್ದು (3)
7. ಈ ಪ್ರಾಣಿ ಕರವನ್ನು ಹೊಂದಿದೆಯಲ್ಲ (3)
10. ಬೆಕ್ಕು ಜಾಲದಲ್ಲಿ ಸಿಲುಕಿದಂತಿದೆ (3)
12. ಕುಟುಂಬದ ಅನುಭವಸ್ಥ (3)
13. ವಸುದೇವನ ಪತ್ನಿ, ಕೃಷ್ಣನ ತಾಯಿ (3)
14. ಗೆಲುವನ್ನು ಹೊಂದಿದವಳು (4)
15. ಕರ್ಕಶವಾದರೂ ಚಳಕದಿಂದ ಕೂಡಿದೆ (4)
16. ಕವಿಯನ್ನು ತೆಗಳಬಲ್ಲ ಪದ್ಯ (3)
19. ವಿವಿಧ ಬಗೆಯ ರೀತಿ (2)
20. ಮಾಣಿಕ್ಯ ಹೊತ್ತು ತಂದ ಹುಡುಗ (2)

**ಹಿಂದಿನ ಸಂಚಿಕೆಯ ಉತ್ತರಗಳು: ಪದಗಳಂಗಳ -೦೧**

**ಎಡದಿಂದ ಬಲಕ್ಕೆ**
1. ನಗರ 4. ಘಮ 6. ಮಲೆನಾಡು 7. ಸಮರ 9. ಯದುಕುಲ 11. ಬಗೆ/ ವಿಧ 12. ಗರಡಿ 14. ಕಳಲೆ 16. ಕಲೆ 17. ರಗಳೆ 19. ಸಡಗರ

**ಮೇಲಿಂದ ಕೆಳಕ್ಕೆ**
1. ನವಿಲು 2. ರಮಣೀಯ 3. ಕಾಡು 5. ಮಧುರ 8. ಮಸೂರ 10. ಕುಸುಮಬಾಲೆ 12. ಗಡಿಯಾರ 13. ನೆಲೆ 14. ಕಳಸ 15. ಕಳೆ 16. ಕರ 18. ಗಡಿ

**ಸುಶ್ಮಿತಾ ಬಿ. ಆರ್,** ದ್ವಿತೀಯ ಬಿ.ಎ.

---

# ಮಾಯಾಚೌಕ - ೦೨

| | | | | | | | | |
|---|---|---|---|---|---|---|---|---|
| | | 3 | | | 9 | 1 | | 7 |
| 7 | 5 | | | 2 | | | | |
| | | | | 7 | | | 8 | |
| | 4 | | | | 3 | | 7 | |
| | 3 | | | | | 5 | | 9 |
| | | | 9 | 6 | 4 | | | 1 |
| | | 7 | 2 | | | | | |
| | 9 | | | 1 | | | 6 | 3 |
| 5 | 1 | 6 | | | | | 2 | 8 |

**ಹಿಂದಿನ ಸಂಚಿಕೆಯ ಉತ್ತರಗಳು: ಮಾಯಾಚೌಕ - ೦೧**

| | | | | | | | | |
|---|---|---|---|---|---|---|---|---|
| 2 | 5 | 7 | 4 | 6 | 9 | 8 | 3 | 1 |
| 9 | 8 | 4 | 3 | 5 | 1 | 6 | 7 | 2 |
| 6 | 1 | 3 | 2 | 8 | 7 | 5 | 4 | 9 |
| 1 | 9 | 6 | 5 | 7 | 3 | 2 | 8 | 4 |
| 7 | 4 | 5 | 1 | 2 | 8 | 3 | 9 | 6 |
| 8 | 3 | 2 | 9 | 4 | 6 | 1 | 5 | 7 |
| 3 | 7 | 8 | 6 | 9 | 2 | 4 | 1 | 5 |
| 4 | 2 | 9 | 8 | 1 | 5 | 7 | 6 | 3 |
| 5 | 6 | 1 | 7 | 3 | 4 | 9 | 2 | 8 |

**ಶಮಿತಾ,** ತೃತೀಯ ಬಿಸಿಎ

# ನಿಷ್ಕಲ್ಮಶವಾದ ಪ್ರೀತಿಯ ದ್ಯೋತಕ "ಚಂಪಕ ಸರಸಿ".

ಪ್ರೀತಿಯ ಸಂಕೇತ, ಪ್ರೇಮ ಮಹಲ್ ಎಂದಾಕ್ಷಣ ಎಲ್ಲರಿಗೂ ಸಾಮಾನ್ಯವಾಗಿ ನೆನಪಾಗುವುದು "ತಾಜ್ ಮಹಲ್". ಆದರೆ ಅದೆಷ್ಟೋ ಜನರಿಗೆ ತಾಜಮಹಲ್ ನಿರ್ಮಾಣಕ್ಕೂ ಸುಮಾರು ೫೦ ವರ್ಷಗಳ ಮುಂಚೆಯೇ ನಮ್ಮ ಕರ್ನಾಟಕದಲ್ಲಿ ಪ್ರೀತಿಯ ಸಂಕೇತವಾಗಿ ಒಂದು ಸ್ಥಳ ನಿರ್ಮಾಣವಾಗಿದೆ ಎಂದು ತಿಳಿದೇ ಇಲ್ಲ.

೧೪೨೪ ರಲ್ಲಿ ಕೆಳದಿಯ ಅರಸರಾದ ಹಿರಿಯ ವೆಂಕಟಪ್ಪ ನಾಯಕ ಅವರು ತಮ್ಮ ಪ್ರೀತಿಯ ಮಡದಿ ಚಂಪಕಾಳ ಸ್ಮರಣಾರ್ಥವಾಗಿ ನಿರ್ಮಿಸಿದ ಕೊಳವೇ ಈ ಚಂಪಕ ಸರಸಿ. ಕೊಳದ ಮಧ್ಯದಲ್ಲಿ ಒಂದು ಶಿವಾಲಯವಿದ್ದು ಸಣ್ಣ ಕಲ್ಲಿನ ಸೇತುವೆಯ ಮೂಲಕ ನಾವು ಅಲ್ಲಿಗೆ ತಲುಪಬಹುದು, ಅಲ್ಲದೆ ದೇವಾಲಯದ ಸುತ್ತ ಚೌಕಾಕಾರದ ಕೊಳ ಹಾಗೂ ನಮ್ಮನ್ನು ಸ್ವಾಗತಿಸಲು ಆನೆಯ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಈ ಚಂಪಕ ಸರಸಿಯ ನಿರ್ಮಾಣದ ಹಿಂದೆ ಒಂದು ಪ್ರೀತಿಯ ಕತೆಯಿದೆ.

**'ಚಂಪಕ ಸರಸಿ', ಮಲೆನಾಡಿನ ಹೆಬ್ಬಾಗಿಲು ಎಂದು ಕರೆಸಿಕೊಳ್ಳುವ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರ ಸಮೀಪದ ಮಲಂದೂರು ಗ್ರಾಮದಲ್ಲಿ ಸ್ಥಾಪಿತವಾಗಿದೆ. ಶಿವಮೊಗ್ಗದಿಂದ ಸುಮಾರು ೫೦ ಕಿಲೋಮೀಟರ್ ಹಾಗು ಸಾಗರದಿಂದ ಸುಮಾರು ೨೫ ಕಿಲೋಮೀಟರ್ ದೂರದಲ್ಲಿದೆ, ಇಲ್ಲಿಗೆ ಬಸ್ ಅಥವಾ ರೈಲಿನ ಮೂಲಕವೂ ಹೋಗಬಹುದು.**

ವೆಂಕಟಪ್ಪನಾಯಕನು ಕವಲೇದುರ್ಗಕೋಟೆಗೆ ಹೋಗುತ್ತಿದ್ದಾಗಲೆಲ್ಲ ಒಂದು ಮನೆಯ ಮುಂದೆ ಸುಂದರವಾದ ರಂಗೋಲಿಯನ್ನು ಗಮನಿಸುತ್ತಿದ್ದನು. ಆ ರಂಗೋಲಿಯನ್ನು ಬಿಡಿಸುತ್ತಿದ್ದ ಸುಂದರವಾದ ಯುವತಿ ಅವರ ಕಣ್ಮನ ಸೆಳೆದಳು ಆಕೆಯೆ "ಚಂಪಕ". ಬೆಸ್ತರ ಹುಡುಗಿಯಾದ ಆಕೆಯನ್ನು ಹಿರಿಯ ವೆಂಕಟಪ್ಪ ನಾಯಕ ವಿವಾಹವಾದನು ಹಾಗೂ ಆಕೆಯನ್ನು ರಾಣಿಯನ್ನಾಗಿ ಮಾಡುವ ನಿರ್ಧಾರ ಕೂಡ ಮಾಡಿದನು. ಆದರೆ ಇಬ್ಬರ ವಯಸ್ಸಿನಲ್ಲಿ ಅಜಗಜಾಂತರ ವ್ಯತ್ಯಾಸವಿದ್ದ ಕಾರಣ ಪ್ರಜೆಗಳು ಹಾಗೂ ರಾಜಮನೆತನದವರು ಆಕೆಯನ್ನು ತಮ್ಮ ರಾಣಿಯಾಗಿ ಸ್ವೀಕರಿಸಲು ಸಿದ್ಧವಿರಲಿಲ್ಲ ಅಲ್ಲದೆ ಆಕೆಯನ್ನು ಮದುವೆಯಾದ ನಂತರ ನಾಯಕರು ಪ್ರಜೆಗಳ ಯೋಗಕ್ಷೇಮ ವಿಚಾರಿಸುತ್ತಿಲ್ಲ ಈಕೆ ಏನೋ ಮೋಡಿ ಮಾಯೆ ಮಾಡಿರಬೇಕು ಎಂದು ತಿಳಿದು ಚಂಪಕಳನ್ನು ದೂಷಿಸಲು ಪ್ರಾರಂಭಿಸಿದರು. ಇದನೆಲ್ಲ ತಿಳಿದೆ ಚಂಪಕ ತನ್ನಿಂದಾಗಿ ರಾಜರಿಗೆ ಅಪಖ್ಯಾತಿ ಬರುತ್ತಿದೆ ಎಂದು ತಿಳಿದು ಹಾಲಲ್ಲಿ ವಜ್ರದ ಪುಡಿ ಬೆರೆಸಿ ಅದನ್ನು ಸೇವಿಸಿ ಪ್ರಾಣತ್ಯಾಗ ಮಾಡಿದಳು. ಅವರಿಬ್ಬರ ನಡುವೆ ವಯಸ್ಸಿನ ಅಂತರವಿದ್ದಿರಬಹುದು ಆದರೆ ಅವರ ಪ್ರೀತಿಯ ನಡುವೆ ಯಾವುದೇ ಅಂತರವಿರಲಿಲ್ಲ. ಆದ್ದರಿಂದ ಆಕೆಯ ಮರಣದ ನಂತರ ಚಂಪಕಳ ಹೆಸರು ಇತಿಹಾಸದಲ್ಲಿ ಉಳಿಯಲು ಈ ಸುಂದರವಾದ ಪುಷ್ಕರಣಿಯನ್ನು ನಿರ್ಮಿಸಿದರು.




**ಸ್ಥಳ ಪರಿಚಯ**


ನೀವು ಎಂದಾದರೂ ಶಿವಮೊಗ್ಗ ಮಾರ್ಗವಾಗಿ ಹೋಗುವಾಗ ಈ ಸ್ಥಳಕ್ಕೆ ಭೇಟಿ ನೀಡಿ ಹಾಗೂ ಅಲ್ಲಿನ ಪ್ರಕೃತಿ ಸೌಂದರ್ಯ ನಿಮ್ಮ ಮನಸೂರೆಗೊಳಿಸುತ್ತದೆ. ಇಂತಹದ್ದೆ ಅದೆಷ್ಟೋ ಸುಂದರವಾದ ಸ್ಥಳಗಳು ನಮ್ಮ ಸುತ್ತ ಮುತ್ತ ಇದ್ದರೂ ನಮಗೆ ಅವುಗಳ ಬಗ್ಗೆ ತಿಳಿದಿರುವುದಿಲ್ಲ. ಆದ್ದರಿಂದ ಇಂತಹ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ವಿಶೇಷತೆಗಳನ್ನು ಸಾಧ್ಯವಾದಷ್ಟು ಜನರಿಗೆ ತಲುಪಿಸುವ ಸಣ್ಣ ಪ್ರಯತ್ನವನ್ನು ಮಾಡಬೇಕಾಗಿದೆ.

**-ವರ್ಷಿಣಿ ಕೆ ಎಂ,** ದ್ವಿತೀಯ ಬಿ.ಎ

## ಕಲಾಮಂಜರಿ




**ಶ್ರದ್ಧಾ**
ದ್ವಿತೀಯ ಬಿಸಿಎ






**ಭರತ್ ಜಿ**
ದ್ವಿತೀಯ ಬಿಬಿಎ



**ಅನ್ವಿತ ಡಿ. ಎನ್.**
ದ್ವಿತೀಯ ಬಿ ಎ